# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 144 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 07.12.2024 • ಶನಿವಾರ • ಪುಟ:04 • ಬೆಲೆ:2
Volume:02 • Issue: 144 • PRGI No:KARKAN/2023/88055 • VIJAYANAGARA • 07.12.2024 • Saturday • Page:04 • Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper



ಸುದ್ದಿ, ಜಾಹೀರಾತು,
ಜಾಗೃತಿ ಪ್ರಕಟಣೆಗಳ ಪ್ರಕಟಣೆಗಾಗಿ
ಸಂಪರ್ಕಿಸಿ
ಮೊ: 9448633038
e-mail: hampitimes@gmail.com


## ಹೆಚ್ಚಾಯ್ತು ಸ್ಪರ್ಧಾಮನೋಭಾವ

### ಹಂಪಿ ಟೈಮ್ಸ್ ವಿಜ್ಞಾನ ಚಿತ್ರ ಸ್ಪರ್ಧೆಯಲ್ಲಿ ಉತ್ಸುಕತೆಯಿಂದ ಪಾಲ್ಗೊಂಡ ವಿದ್ಯಾರ್ಥಿಗಳು | ಸಾಥ್ ನೀಡಿದ ಶಿಕ್ಷಕರು



ಹೊಸಪೇಟೆಯ ಮುನಿಸಿಪಲ್ ಹೈಸ್ಕೂಲ್ ವಿದ್ಯಾರ್ಥಿಗಳು ಶುಕ್ರವಾರ 10 ನಿಮಿಷಿದ ವಿಜ್ಞಾನ ಚಿತ್ರ ಸ್ಪರ್ಧೆಯಲ್ಲಿ ಭಾಗವಹಿಸಿದರು. ಶಿಕ್ಷಕರು ಇದ್ದರು.

■ **ಹಂಪಿ ಟೈಮ್ಸ್ ಹೊಸಪೇಟೆ**


ಎಸ್ಸೆಸ್ಸೆಲ್ಸಿ ಈ ಬಾರಿಯ ಫಲಿತಾಂಶ ನಮ್ಮದೆ ಎನ್ನುವ ಶೀರ್ಷಿಕೆಯಡಿ ಹಂಪಿ ಟೈಮ್ಸ್ ಬಳಗವು ಶೈಕ್ಷಣಿಕ ವರ್ಷದ ಆರಂಭದಿಂದಲೂ ವಿದ್ಯಾರ್ಥಿಗಳ ಕಲಿಕೆಗೆ ಸ್ಪೂರ್ತಿ ತುಂಬಲು ಪಠ್ಯಾಧಾರಿತ ಪ್ರಶ್ನೋತ್ತರ ಸರಣಿಯನ್ನು ಪ್ರಕಟಿಸುತ್ತಾ ಬಂದಿದೆ. ವಾರ್ಷಿಕ ಪರೀಕ್ಷೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಮತ್ತಷ್ಟು ಸಕ್ರಿಯಗೊಳಿಸಲು ಮತ್ತು ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸಲು ಸಹಕಾರಿಯಾಗುವ ನಿಟ್ಟಿನಲ್ಲಿ ಶಿಕ್ಷಕರ ತಂಡದೊಂದಿಗೆ ಚರ್ಚಿಸಿ ಆಯೋಜಿಸಲಾದ ವಿಜ್ಞಾನ ಚಿತ್ರ ಸ್ಪರ್ಧೆಗೆ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಆರಂಭದ ಮೊದಲ ವಾರವೂ ಹೆಚ್ಚಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಎರಡನೇ ವಾರ ಜಿಲ್ಲೆ ಸೇರಿದಂತೆ ಹೊರ ಜಿಲ್ಲೆಗಳ ವಿದ್ಯಾರ್ಥಿಗಳು ಅತ್ಯಂತ ಆಸಕ್ತಿಯಿಂದ ವಿಜ್ಞಾನ ಚಿತ್ರ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವುದನ್ನು ಕಂಡ ಶಿಕ್ಷಕರಲ್ಲೂ ಹರ್ಷ ತಂದಿದೆ. ಮಕ್ಕಳ ಉತ್ತಮ ಫಲಿತಾಂಶ ತರುವ ಭರವಸೆ ಚಿಗುರೊಡೆದಿದೆ.

ಪ್ರತಿ ಶುಕ್ರವಾರ ನಡೆಯುವ ವಿಜ್ಞಾನ ಚಿತ್ರ ಸ್ಪರ್ಧೆಯಲ್ಲಿ ಡಿ.6 ರಂದು ಮನುಷ್ಯನ ಹೃದಯ ಛೇದ ನೋಟದ ಅಂದವಾದ ಚಿತ್ರವನ್ನು ಬಿಡಿಸಿ, ಭಾಗಗಳನ್ನು ಗುರುತಿಸಲು ತಿಳಿಸಲಾಗಿತ್ತು. ವಿದ್ಯಾರ್ಥಿಗಳು ತಾವೇನು ಕಡಿಮೆ ಇಲ್ಲವೆಂಬಂತೆ ಸುಂದರ ಚಿತ್ರಗಳನ್ನು ಬಿಡಿಸುವ ಸ್ಪರ್ಧೆಯಲ್ಲಿ ಪಾಲ್ಗೊಂಡರು. ಆಯಾ ಶಾಲಾ ಶಿಕ್ಷಕರು ಮಕ್ಕಳಿಗೆ ಸ್ಪರ್ಧಾ ನಿಯಮಗಳನ್ನು ತಿಳಿಸಿ, ಶಾಲೆಯಲ್ಲಿ ವಿದ್ಯಾರ್ಥಿಗಳು ಬರೆದ ಚಿತ್ರಗಳನ್ನು ಪರಿಶೀಲಿಸಿ, ದಿ ಬೆಸ್ಟ್ ಚಿತ್ರವೊಂದನ್ನು ಆಯ್ಕೆ ಸಮಿತಿಗೆ ಕಳಿಸಿದ್ದಾರೆ. ಎಲ್ಲಾ ಮಕ್ಕಳ ದಿ ಬೆಸ್ಟ್ ಚಿತ್ರಗಳನ್ನು ಒಟ್ಟುಗೂಡಿಸಿ ಅತ್ಯುತ್ತಮ ಚಿತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು ಎಂದು ಹಂಪಿ ಟೈಮ್ಸ್ ಬಳಗ ತಿಳಿಸಿದೆ.

> ಹಂಪಿ ಟೈಮ್ಸ್ ದಿನಪತ್ರಿಕೆ ವಿದ್ಯಾರ್ಥಿಗಳಲ್ಲಿ ಸ್ಪರ್ಧಾಮನೋಭಾವ ಬೆಳೆಸುವುದರೊಂದಿಗೆ ಹೊಸತನ ಹುಟ್ಟುಹಾಕಿದೆ. ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆ ಹೊರಹಾಕಲು ಪತ್ರಿಕೆ ವೇದಿಕೆ ರೂಪಿಸಿ, ಪ್ರೋತ್ಸಾಹಿಸುತ್ತಿರುವುದು ಹೆಮ್ಮೆಯ ಸಂಗತಿ. ಪತ್ರಿಕಾ ಬಳಗದ ಪ್ರಯತ್ನ ವಿಶಿಷ್ಟ ಹಾಗೂ ಮಾದರಿ.
>
> – ಎಂ.ಚನ್ನಬಸಪ್ಪ
> ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹೊಸಪೇಟೆ

> ವಿಜ್ಞಾನ ಕಲಿಕೆಯು ಕೇವಲ ಪಠ್ಯಪುಸ್ತಕ ಓದುವುದು ಮತ್ತು ಪರೀಕ್ಷೆ ಬರೆಯುವುದಕ್ಕೆ ಸೀಮಿತವಲ್ಲ. ಅದು ಸೃಜನಾತ್ಮಕತೆಯನ್ನು ಬೆಳೆಸುವ ತತ್ವಗಳನ್ನು ತಾತ್ವಿಕವಾಗಿ ಅರ್ಥಮಾಡಿ ಕೊಳ್ಳುವ ಒಂದು ಪ್ರಕ್ರಿಯೆಯಾಗಿದೆ. 10ನೇ ತರಗತಿ ವಿದ್ಯಾರ್ಥಿ ಗಳಿಗೆ ಪರೀಕ್ಷೆಯ ಭಯ ತೊಲಗಿಸಿ, ಪರೀಕ್ಷೆ ಸಿದ್ಧತೆಯನ್ನು ಬೆಂಬಲಿಸಲು ಮತ್ತು ಕೌಶಲ್ಯ ಗಳನ್ನು ಅಭಿವೃದ್ಧಿ ಪಡಿಸಲು ವಿಜ್ಞಾನ ಚಿತ್ರ ಸ್ಪರ್ಧೆ ಆಯೋಜಿಸಲಾಗಿದ್ದು, ನಿರೀಕ್ಷೆಗೂ ಮೀರಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.
>
> – ಹಂಪಿ ಟೈಮ್ಸ್ ಬಳಗ



ಹೊಸಪೇಟೆಯ ಬಾಲಕಿಯರ ಪ್ರೌಢಶಾಲಾ ವಿದ್ಯಾರ್ಥಿಗಳು ವಿಜ್ಞಾನ ಚಿತ್ರ ಸ್ಪರ್ಧೆಯಲ್ಲಿ ಭಾಗವಹಿಸಿದರು.

**ಮೈಕ್ರೋ ನ್ಯೂಸ್**


## ನಾಳೆ ವೀರರಾಣಿ ಕಿತ್ತೂರು ಚೆನ್ನಮ್ಮಾಜಿ ವೃತ್ತ, ವಧು-ವರರಾನ್ವೇಷಣೆ ಕೇಂದ್ರ ಉದ್ಘಾಟನೆ



**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮಾಜಿ ವೃತ್ತ ನಾಮಕರಣ ಹಾಗೂ ಪಂಚಮಸಾಲಿ ಸಮಾಜದ ವಧು– ವರರಾನ್ವೇಷಣೆ ಕೇಂದ್ರದ ಉದ್ಘಾಟನೆ ಡಿ–8 ಭಾನುವಾರ ಬೆಳಿಗ್ಗೆ 10.30ಕ್ಕೆ ವೀರಶೈವ ಪತ್ತಿನ ಸಹಕಾರ ಸಂಘದ ಸಹಕಾರದೊಂದಿಗೆ ನೆರವೇರಲಿದೆ ಎಂದು ವೀರಶೈವ ಪಂಚಮಸಾಲಿ ಸಮಾಜದ ತಾಲೂಕು ಘಟಕ ಅಧ್ಯಕ್ಷ ಚಾಪಿ ಚಂದ್ರಪ್ಪ ತಿಳಿಸಿದ್ದಾರೆ. ಪಂಚಮಸಾಲಿ ಸಮಾಜದ ಹರಿಹರ ಪೀಠದ ರಾಜ್ಯ ಅಧ್ಯಕ್ಷ ಸೋಮನಗೌಡ ಪಾಟೀಲ್, ಕಾರ್ಯದರ್ಶಿಗಳು ಪರಮೇಶ್ವರಪ್ಪ ಪಟ್ಟಣ ಶೆಟ್ಟಿ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

**ಆನಂದ ಬಾಣ**




## ಆಪ್ತ ಸಮಾಲೋಚಕರ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ ಆಕ್ಷೇಪಣೆಗೆ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಯೋಜನೆಗಳಡಿ ಆರೋಗ್ಯ ಇಲಾಖೆಯಿಂದ ಆಹ್ವಾನಿಸಿದ್ದ ಜಿಲ್ಲೆಯ ಆಪ್ತ ಸಮಾಲೋಚಕರ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದ್ದು ಆಕ್ಷೇಪಣೆಗೆ ಆಹ್ವಾನಿಸಲಾಗಿದೆ. ಆಕ್ಷೇಪಣೆಗಳನ್ನು ಡಿಸೆಂಬರ್ 13ರ ಸಂಜೆ 5.30ರೊಳಗಾಗಿ ಸಲ್ಲಿಸಬಹುದು.

> **ಆಕ್ಷೇಪಣೆಗಳನ್ನು ಡಿಸೆಂಬರ್ 13ರ ಸಂಜೆ 5.30ರೊಳಗಾಗಿ ಸಲ್ಲಿಸಿ**

ಈ ನೇಮಕಾತಿಯ ಒಟ್ಟು ಅರ್ಜಿ ಸಲ್ಲಿಸಿದವರ ಪಟ್ಟಿ, ತಾತ್ಕಾಲಿಕ ಆಯ್ಕೆ ಪಟ್ಟಿ, ಕಾಯ್ದಿರಿಸಿದ ಆಯ್ಕೆ ಪಟ್ಟಿ ತಿರಸ್ಕೃತ ಅರ್ಜಿಗಳ ಪಟ್ಟಿಗಳನ್ನು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಕಚೇರಿಯ ಸಮಯದಲ್ಲಿ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಉಪಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# ಭಾವಪೂರ್ಣ ಶ್ರದ್ಧಾಂಜಲಿ



ಲಿಂಗೈಕ್ಯ: ಶ್ರೀಮತಿ ಬಿ.ಎಂ.ಸುಶೀಲಮ್ಮ, ಹೊಸ ಅಮರಾವತಿ, ಹೊಸಪೇಟೆ

ನಮ್ಮ ಪೂಜ್ಯ ಮಾತೋಶ್ರೀ, ವೀರಶೈವ ಲಿಂಗಾಯತ ಸಮಾಜದ ಹಿರಿಯ ಚೇತನ **ಶ್ರೀಮತಿ ಬಿ.ಎಂ.ಸುಶೀಲಮ್ಮ** (87) ಶುಕ್ರವಾರ 06.12.2024 ರಂದು ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ನಮ್ಮ ಕುಟುಂಬಕ್ಕೆ ಶ್ರೇಷ್ಠ ಆಧಾರವಾಗಿ, ತನ್ನ ಪ್ರೀತಿ ಮತ್ತು ಮಮತೆಯಿಂದ ಸಮಾಜದ ಮನೆ ಮನಗಳಲ್ಲಿ ಜ್ಯೋತಿಯಾದ ಅವರ ತಪಸ್ಸುಮಯ ಜೀವನ ನಮಗೆ ಸದಾ ಪ್ರೇರಣೆಯಾಗಿತ್ತು. ಮಾತೋಶ್ರೀ ತೋರಿದ ಮಾರ್ಗ, ಸಂಸ್ಕಾರಗಳ ಬೆಳಕು, ಮತ್ತು ನಂಬಿಕೆಯ ಶಕ್ತಿ ನಮ್ಮ ಜೀವನದಲ್ಲಿ ಶಾಶ್ವತವಾಗಿ ನೆಲೆಸಿವೆ. ಈ ಲೋಕವನ್ನು ತೊರೆದು ಹೋದರೂ, ಅವರ ಪ್ರೀತಿ, ಆಶೀರ್ವಾದ ಮತ್ತು ಸ್ಮೃತಿಗಳು ನಮ್ಮೆಲ್ಲರ ಹೃದಯದಲ್ಲಿ ಜೀವಂತವಾಗಿವೆ. ನಿಧನದ ನಂತರ ನೇತ್ರದಾನ ಮಾಡಿ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ. ಮಹಾನ್ ತಾಯಿಯ ನಿಧನ ನಮ್ಮೆಲ್ಲರಿಗೂ ತುಂಬಾ ನೋವನ್ನುಂಟುಮಾಡಿದೆ. ಅವರ ಜೀವನದ ಅಮೂಲ್ಯ ಪಾಠಗಳು ಮತ್ತು ಮೌಲ್ಯಗಳು ನಮಗೆ ಎಂದಿಗೂ ಮಾರ್ಗದರ್ಶಕವಾಗಲಿ. ತಾಯಿಯ ದಿವ್ಯ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಪ್ರಾರ್ಥಿಸುತ್ತೇವೆ.

ಮಹಾತಾಯಿಯ ಅಂತ್ಯಸಂಸ್ಕಾರ ದಿನಾಂಕ 07.12.2024 ರಂದು ಶನಿವಾರ ಬೆಳಿಗ್ಗೆ 11 ಕ್ಕೆ ಹೊಸಪೇಟೆ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತರು:- **ಸ್ವಾತಿ ಸೌಂಡ್ಸ್ ಅಂಡ್ ಡೆಕೋರೇಟರ್ಸ್ ಕುಟುಂಬ ವರ್ಗ, ಹೊಸಪೇಟೆ**

ಬಿ.ಎಂ.ಪ್ರಕಾಶ, ಬಿ.ಎಂ.ಸತೀಶ, ಬಿ.ಎಂ.ಸೋಮಶೇಖರ, ಬಿ.ಎಂ.ಲಿಂಗೇಶ, ಶ್ರೀಮತಿ ಉಮಾದೇವಿ, ಶ್ರೀಮತಿ ಗಂಗಮ್ಮ, ಶ್ರೀಮತಿ ಮಂಜುಳಾ, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು. ಮೊ: 9448261804 | 9742130982 | 9449667583

## ಸ್ಟುಡೆಂಟ್ ಕಾಲಂ

# ಭಾನುವಿನ ಸಿನಿಮಾ ಮತ್ತು ಹಲ್ಲಿಯ ಪಾದ



ಒಂದು ಗ್ರಾಮದಲ್ಲಿ ರಮೇಶ್ ಮತ್ತು ಸುಮಿತ್ರ ಎಂಬ ದಂಪತಿಗಳಿದ್ದರು. ಅವರಿಗೆ ಭಾನು ಮತ್ತು ಕೀರ್ತಿ ಎಂಬ ಮುದ್ದಾದ ಮಕ್ಕಳಿದ್ದರು. ಒಂದು ಭಾನುವಾರ ಭಾನು ಮತ್ತು ಕೀರ್ತಿ ಇಬ್ಬರು ಬೆಳ್ಳಿಗ್ಗೆಯೇ ಸಿನಿಮಾಗೆ ಹೋಗಿ ಬಂದಿದ್ದರು. ಮನೆಗೆ ಮರಳಿ, ರಾತ್ರಿ ಊಟದ ಹೊತ್ತಾದರೂ ಅವರ ತಲೆಯಲ್ಲಿ ಇನ್ನು ಸಿನಿಮಾ ದೃಶ್ಯಗಳೇ ಓಡುತ್ತಿದ್ದವು. ಆ ಸಿನಿಮಾದ ನಾಯಕ ಅದ್ಯಾವುದೋ ವಿಶೇಷ ಚಪ್ಪಲಿ ತೊಟ್ಟು ಗೋಡೆ ಮೇಲೆಲ್ಲ ಓಡಾಡಿದ್ದನ್ನು ಅವರು ಪದೇ ಪದೇ ನೆನಪಿಸಿಕೊಳ್ಳುತಿದ್ದರು.

ರಾತ್ರಿ ಊಟದ ವೇಳೆ ಭಾನು ಅಮ್ಮನನ್ನು 'ಅಂತಹ ಚಪ್ಪಲಿ ನಮಗೂ ಸಿಗುತ್ತಾ?' ಎಂದು ಕೇಳಿದ "ನನಗೂ ಬೇಕು!" ಎಂದಳು ಕೀರ್ತಿ. 'ಮೊದಲು ಊಟ ಮುಗಿಸಿ. ಆಮೇಲೆ ಚಪ್ಪಲಿ ಬಗ್ಗೆ ಮಾತಾಡೋಣ' ಎಂದರು ಅಮ್ಮ. ಸಿನಿಮಾ ಗುಂಗಿನಲ್ಲೇ ಊಟ ಮುಗಿಸಿದ ಭಾನು ತೊಳೆದ ತಟ್ಟೆಯನ್ನು ಅಡುಗೆ ಮನೆಯಲ್ಲಿ ಇಡಲು ಹೋದ. ಯಾಕೋ ತಲೆ ಎತ್ತಿ ನೋಡಿದವನು 'ಅಮ್ಮಾ, ಹಲ್ಲಿ!' ಎಂದು ಕೂಗಿದ. ಅಮ್ಮನಿಗಿಂತ ಮೊದಲು ಓಡಿ ಬಂದ ಕೀರ್ತಿ "ಸಿನಿಮಾದ ಹೀರೋ ಥರಾನೇ ಓಡಾಡ್ತಾ ಇದೇ ಅಲ್ವಾ ಇದು?" ಎಂದಳು.

ಅರೆ! ಹೌದಲ್ವಾ, ಅನ್ನಿಸಿತು ಭಾನುಗೆ. ಸಿನಿಮಾದ ನಾಯಕ ಗೋಡೆಯ ಮೇಲೆ ಓಡಾಡಿದರೆ, ಈ ಹಲ್ಲಿ ಪೂರ್ತಿ ತಲೆಕೆಳಗಾಗಿ ಸೂರಿನ ಮೇಲೆಯೇ ಓಡಾಡುತ್ತಿದೆ. ಸಿನಿಮಾ ಹೀರೋಗೆ ಇದ್ದಂತೆ ವಿಶೇಷ ಚಪ್ಪಲಿ ಇಲ್ಲದಿದ್ದರೂ ಹಲ್ಲಿ ಈ ಸಾಹಸ ಮಾಡುತ್ತಿದೆ!



'ಅಮ್ಮಾ' ಅವನು ಇನ್ನೊಮ್ಮೆ ಕೂಗಿದ, 'ಈ ಹಲ್ಲಿ ಗೋಡೆ ಮೇಲೆ ಅಷ್ಟು ಸುಲಭವಾಗಿ ಓಡಾಡೋದು ಹೇಗೆ?' ಎಂದ ಭಾನು. "ಹಲ್ಲಿಯ ಪಾದದ ವಿಶಿಷ್ಟ ರಚನೆಯಿಂದಾಗಿ ಅದು ಎಲ್ಲಿ ಬೇಕಾದರು ಓಡಾಡಬಹುದು. ಅದರ ಪಾದದಲ್ಲಿ ಸ್ಟಿಕರ್ ಥರ ಅಂಟು ಇರುತ್ತಂತೆ ಕಣೋ, ಅಂಟು ಇರೋದ್ರಿಂದಲೇ ಹಲ್ಲಿ ಎಲ್ಲಿ ಬೇಕಾದರೂ ಓಡಾಡಬಹುದು ಅಂತ ಸ್ಕೂಲಲ್ಲಿ ನಮ್ಮ ಟೀಚರ್ ಹೇಳ್ತಿದ್ರು" ಅಮ್ಮನಿಗಿಂತ ಮೊದಲು ಕೀರ್ತಿ ಉತ್ತರಿಸಿದಳು.

'ಪಾದದಲ್ಲಿ ಸ್ಟಿಕರ್ ಇದೆಯಾ?' ಬಾನು ಕೇಳಿದ. 'ನಮಗೂ ಆ ಥರ ಸ್ಟಿಕರ್ ಹಾಕಿಬಿಟ್ಟರೆ ನಾವು ನಡೆದಾಡುವುದು ಹೇಗೆ?' "ಹಲ್ಲಿಯ ಪಾದದ ಅಂಟು, ಸ್ಟಿಕರ್ ಅಂಟು ಎರಡು ಬೇರೆ ಬೇರೆ ರೀತಿಯವು," ಅಮ್ಮಾ ಹೇಳಿದರು. ಅವರಿಗೆ ಹಲ್ಲಿ ಕಂಡರೆ ಭಯವಾದರೂ ಜೀವವಿಜ್ಞಾನದ ಬೇಕಾದಷ್ಟು ವಿಷಯಗಳು ಗೊತ್ತಿವೆ.

'ಹಲ್ಲಿಯ ಪಾದದ ಅಡಿಯಲ್ಲಿ ಕೂದಲಿಗಿಂತ ತೆಳ್ಳಗಿರುವ ಸೇಟೀ ಎಂಬ ರಚನೆಗಳಿರುತ್ತವೆ. ಹಲ್ಲಿಯು ಗೋಡೆಗೆ ಅಥವಾ ಸೂರಿಗೆ ಸರಾಗವಾಗಿ ಅಂಟಿಕೊಳ್ಳಲು ಅದಕ್ಕೆ ಈ ರಚನೆಗಳೇ ಸಹಾಯ ಮಾಡುತ್ತವೆ. ಕಾಲು ಎತ್ತಿದರೆ ಅಂಟು ಬಿಡುತ್ತದೆ ಮತ್ತೆ ಇಟ್ಟ ತಕ್ಷಣ ಅಂಟಿಕೊಂಡುಬಿಡುತ್ತದೆ!'

ಭಾನು ಮತ್ತು ಕೀರ್ತಿ ಇಬ್ಬರು ಆಸಕ್ತಿಯಿಂದ ಕೇಳುತ್ತಿದ್ದರು. ಅಷ್ಟರಲ್ಲಿ ಬಚ್ಚಲು ಮನೆಯಿಂದ ಅವರ ತಂದೆ ರಮೇಶ್ ಧ್ವನಿ ಕೇಳಿಸಿತು, 'ಮತ್ತೆ ಮತ್ತೆ ಸ್ಟಿಕರ್ ಹಾಕಿ ಮೂರು ಸಲ ಅಂಟಿಸಿದ್ದಾಯಿತು, ಈ ಟೂತ್ ಬ್ರಶ್ ಸ್ಟಾಂಡು ನೋಡು ಮತ್ತೆ ಬಿದ್ದುಹೋಗಿದೆ'.

ಬಾನುನಿಗೊಂದು ಐಡಿಯಾ ಬಂತು. 'ಅಪ್ಪಾ, ಹಲ್ಲಿಯ ಪಾದದಲ್ಲಿ ಇದೆಯಂತಲ್ಲ, ಅಂಥದ್ದೇ ಅಂಟಿರುವ ಸ್ಟಿಕರ್ ತೊಗೊಂಡು ಬನ್ನಿ. ಅದನ್ನು ಹಾಕಿ ಅಂಟಿಸಿಬಿಟ್ಟರೆ ಟೂತ್ ಬ್ರಶ್ ಸ್ಟಾಂಡು ಇನ್ನೊಂದು ಸಲ ಬೀಳೋದೇ ಇಲ್ಲ!' ಎಂದ ಭಾನು.

ಅದನ್ನು ಕೇಳಿದ ಅಮ್ಮ ಮತ್ತು ಕೀರ್ತಿ ಇಬ್ಬರು ಜೋರಾಗಿ ನಕ್ಕರು. ಬಹುತೇಕ ಸ್ಟಿಕರ್‌ಗಳನ್ನು ಒಂದು ಸಾರಿ ಮಾತ್ರವೇ ಬಳಸಲು ಸಾಧ್ಯ. ಎಷ್ಟೇ ಜೋಪಾನವಾಗಿ ಬಿಡಿಸುತ್ತೇವೆಂದರೂ ಅವನ್ನು ಎರಡನೇ ಬಾರಿ ಬಳಸುವುದು ಕಷ್ಟವೇ. ಈ ಪರಿಸ್ಥಿತಿ ಬದಲಿಸಿ, ಎಷ್ಟು ಸಾರಿ ಬೇಕಾದರೂ ಅಂಟಿಸಿ ತೆಗೆಯಬಹುದಾದಂತಹ ಸ್ಟಿಕರ್‌ಗಳನ್ನು ತಯಾರಿಸುವ ಪ್ರಯತ್ನದಲ್ಲಿ ವಿಜ್ಞಾನಿಗಳು ತೊಡಗಿದ್ದಾರೆ. ಅವರಿಗೆ ಪ್ರೇರಣೆ ನೀಡಿರುವುದು ಹಲ್ಲಿಗಳೇ. ಹಲ್ಲಿಯ ಕಾಲಿನಲ್ಲಿರುವ ರಚನೆಯನ್ನೇ ಅನುಸರಿಸಿ ವಿಶಿಷ್ಟ ವಸ್ತುವೊಂದನ್ನು ರೂಪಿಸಿರುವ ವಿಜ್ಞಾನಿಗಳು, ಅದನ್ನು ಎಲ್ಲಿಗೆ ಎಷ್ಟು ಸಾರಿ ಬೇಕಾದರೂ ಅಂಟಿಸುದನ್ನು, ಬಿಡಿಸುವುದನ್ನು ಸಾಧ್ಯವಾಗಿಸಿದ್ದಾರೆ. ಹೆಚ್ಚಿನ ಉಷ್ಣತೆ ಒತ್ತಡದಲ್ಲೂ ಚೆನ್ನಾಗಿ ಕೆಲಸ ಮಾಡುವ ಈ ಅಂಟನ್ನು ಭೂಮಿಯ ಮೇಲೆ ಮಾತ್ರವಲ್ಲ, ಬ್ಯಾಹಾಕಾಶದಲ್ಲೂ ಬಳಸುವುದು ಸಾಧ್ಯವಂತೆ. ಮುಂದೊಂದು ದಿನ ಈ ತಂತ್ರಜ್ಞಾನ ನಮಗೂ ಸಿಕ್ಕರೆ ಬಾನು ಮತ್ತು ಕೀರ್ತಿ ನೋಡಿದ ಸಿನಿಮಾದ ನಾಯಕನಂತೆ ನಾವು ಗೋಡೆಯಸೂರಿನ ಮೇಲೆಲ್ಲಾ ನಡೆದಾಡುವುದು ಸಾಧ್ಯವಾಗಬಹುದೋ ಏನೋ!

**– ಎಂ.ಎಂ.ಅಮೋಘ. 10ನೇ ತರಗತಿ**

ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


# ಬೆಂಕಿ ಇಲ್ಲದಿದ್ದರೆ....

ತಾತ ಪತ್ರಿಕೆಯಲ್ಲಿನ ಸುದ್ದಿ ಓದುತ್ತಿದ್ದರು. ಅಮೇಜಾನ್ ಕಾಡಿಗೆ ಬೆಂಕಿಬಿದ್ದ ಸುದ್ದಿ ಇಡೀ ಪ್ರಪಂಚವನ್ನೇ ತಲ್ಲಣಗೊಳಿಸಿತ್ತು. ಛೇ! ಹೀಗಾಗಬಾರದಿತ್ತು ಎಂದು ಉದ್ಗಾರ ತೆಗೆದರು. ಪಕ್ಕದಲ್ಲೇ ಆಟವಾಡುತ್ತಿದ್ದ ಸೋನು "ಏನಾಯ್ತು ತಾತ?' ಎಂದ. 'ಅಮೇಜಾನ್ ಕಾಡಿಗೆ ಬೆಂಕಿಬಿದ್ದು ಬಹುತೇಕ ಕಾಡಿನ ಸಂಪತ್ತು ನಾಶವಾಗಿದೆಯಂತೆ. ಹೀಗಾದರೆ ಜೀವಿಗಳ ಗತಿಯೇನು?' ಎಂದರು ತಾತ. "ಬೆಂಕಿ ಇಲ್ಲದೇ ಇದ್ರೆ ಚೆನ್ನಾಗಿರುತ್ತಿತ್ತು ಅಲ್ವಾ ತಾತ" ಎಂದ ಸೋನು. 'ಇಲ್ಲಪ್ಪ ಬೆಂಕಿ ನಮ್ಮ ನಮ್ಮೆಲ್ಲರ ಜೀವನದ ಬಹುಮುಖ್ಯ ಸಂಶೋಧನೆ' ಎಂದರು ತಾತ. "ಬೆಂಕಿಯನ್ನು ಸಂಶೋಧಿಸಿದವರು ಯಾರು ತಾತ?. ಅದು ಇಲ್ಲದಿದ್ದರೆ ಏನಾಗುತ್ತಿತ್ತು? ಎಂದ ಸೋನು. ಅವನ ಪ್ರಶ್ನೆ ನಿಮ್ಮ ಪ್ರಶ್ನೆಯೂ ಆಗಿರಬಹುದು ಅಲ್ಲಾ? ಅದಕ್ಕಾಗಿ ಮುಂದೆ ಓದಿ.

ಮಾನವನ ಮೊಟ್ಟಮೊದಲ ಆವಿಷ್ಕಾರವೆಂದರೆ ಬೆಂಕಿ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಬೆಂಕಿಯನ್ನು ಯಾರೂ ಸಂಶೋಧಿಸಲಿಲ್ಲ. ಅದಾಗಲೇ ನಮ್ಮ ಪ್ರಕೃತಿಯಲ್ಲಿ ಇತ್ತು. ನೂರಾರು ಸಾವಿರ ವರ್ಷಗಳ ಹಿಂದಿನ ನಮ್ಮ ಪೂರ್ವಜರು ಬೆಂಕಿಯ ಉಪಯೋಗವನ್ನು ಕಂಡುಕೊಂಡಿದ್ದರು. ಪೂರ್ವ ಇತಿಹಾಸ ಕಾಲದಮಾನವಹಸಿಮಾಂಸವನ್ನೇತನ್ನಆಹಾರವನ್ನಾಗಿಸಿಕೊಂಡಿದ್ದ. ಬೇಟೆಯೊಂದು ಅನಿರೀಕ್ಷಿತವಾಗಿ ಕಾಡಿನ ಬೆಂಕಿಯಲ್ಲಿ ಬಿತ್ತು. ಹಸಿವೆಯಿಂದ ಬಳಲಿದ ಮಾನವ ಬೆಂಕಿಗೆ ಬಿದ್ದ ಬೇಟೆಯನ್ನು ತಿಂದಾಗ ವಿಶೇಷ ಎನಿಸಿತು. ಹಸಿಯಾಗಿ ತಿನ್ನುತ್ತಿದ್ದ ಮಾಂಸ ಬೆಂಕಿಯಲ್ಲಿ ಬೆಂದಿದ್ದರಿಂದ ರುಚಿಯಾ ಗಿತ್ತು. ನಂತರದ ದಿನಗಳಲ್ಲಿ ಮಾಂಸವನ್ನು ಬೆಂಕಿಯಲ್ಲಿ ಬೇಯಿಸುವುದನ್ನು ಕಲಿತ. ಹೀಗೆ ಪ್ರಾರಂಭವಾದ ಬೆಂಕಿಯ ಬಳಕೆ ಇಂದು ದೈನಂದಿನ ಭಾಗವಾಗಿದೆ. ಇಂತಹ ಮಹತ್ತರ ಬೆಂಕಿಯ ಮಹತ್ವವನ್ನು ಇಂದಿನ ಪೀಳಿಗೆ ಲಘುವಾಗಿ ಪರಿಗಣಿಸಿದೆ ಎಂಬುದು ಹಾಸ್ಯಾಸ್ಪದವಾದರೂ ಒಂದು ಕ್ಷಣ ಚಿಂತಿಸಿಬೇಕಾದ ಅನಿವಾರ್ಯ ಸಂಗತಿ. ಒಂದು ವೇಳೆ ಬೆಂಕಿಯ ಉಪಯೋಗ ಆಗದಿದ್ದರೆ ಜೀವಿಗಳು ಹೇಗಿರುತ್ತಿದ್ದವು? ಬೇಯಿಸಿದ ಆಹಾರವಿಲ್ಲದೇ ನಾವು ಏನನ್ನು ತಿನ್ನಬೇಕಾಗಿತ್ತು? ಸೂರ್ಯ ಮುಳುಗಿನ ನಂತರ ನಮ್ಮ ಜೀವನ ಹೇಗಿರುತ್ತಿತ್ತು? ಬೆಂಕಿಯ ಕೊರತೆಯು ನಮ್ಮ ಬುದ್ಧಿವಂತಿಕೆಯನ್ನು ಮೊಟಕುಗೊಳಿಸುತ್ತಿತ್ತೇ? ಎಂಬ ಹಲವಾರು ಪ್ರಶ್ನೆಗಳು ನಮ್ಮನ್ನು ಕಾಡುತ್ತಲೇ ಇರುತ್ತವೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ



## ಏನಾಗುತ್ತೆ ಗುರು?

ಬೆಂಕಿ ಬಳಕೆಯ ಆರಂಭದ ಕಾಲದಲ್ಲಿ ಸ್ಟಾಕ್ ಮಾರುಕಟ್ಟೆಗಳು ಇದ್ದಿದ್ದರೆ ಎಲ್ಲರೂ ಬೆಂಕಿಯನ್ನು ಗುಹೆಗಳಲ್ಲಿ ಸ್ಟಾಕ್ ಮಾಡಲು ಹೂಡಿಕೆ ಮಾಡುತ್ತಿದ್ದರು ಎಂದೆನಿಸದೇ ಇರದು. ಏಕೆಂದರೆ ಬೆಂಕಿಯು ಸರ್ವಕಾಲಿಕ ಪ್ರಮುಖ ಆವಿಷ್ಕಾರವಾಗಿದೆ. ಬೇಯಿಸಿದ ಆಹಾರ, ಉಷ್ಣತೆ, ಶಸ್ತ್ರಾಸ್ತ್ರಗಳ ತಯಾರಿಕೆ, ಕೈಗಾರಿಕೆ, ತಂತ್ರಜ್ಞಾನ, ವೈದ್ಯಕೀಯ ಉದ್ಯೋಗಗಳೆಲ್ಲವೂ ಬೆಂಕಿಯನ್ನೇ ಅವಲಂಬಿಸಿವೆ.

ಬೆಂಕಿ ಇಲ್ಲದೇ ಇದ್ದಿದ್ದರೆ ನಮ್ಮ ಸುತ್ತಲಿನ ಪ್ರಪಂಚ ಸಂಪೂರ್ಣವಾಗಿ ಈಗಿನಂತೆ ವೈವಿಧ್ಯಮಯವಾಗಿ ಇರುತ್ತಿರಲಿಲ್ಲ. ಎಲ್ಲವೂ ಒಂದೇ ರೀತಿಯಲ್ಲಿ ಇರುತ್ತಿತ್ತು. ಎಲ್ಲರ ಆಹಾರವೂ ಹಸಿಯಾಗಿರುತ್ತಿತ್ತು.ಬಹುತೇಕನಮ್ಮೆಲ್ಲಉತ್ಪಾದನೆಗಳುಸ್ಥಗಿತಗೊಂಡಿರುತ್ತಿದ್ದವು. ಇಂದು ನಾವೆಲ್ಲಾ ದಿನದ ಬಹುತೇಕ ಸಮಯದಲ್ಲಿ ಚಟುವಟಿಕೆಯಿಂದ ಇರುತ್ತೇವೆ. ಒಂದಲ್ಲ ಒಂದು ಕೆಲಸದಲ್ಲಿ ತೊಡಗಿರುತ್ತೇವೆ. ಇದಕ್ಕೆಲ್ಲ ಕಾರಣ ಬೆಂಕಿಯ ಬಳಕೆ. ಬೆಂಕಿ ಇಲ್ಲದಿದ್ದರೆ ನಾವೆಲ್ಲ ಕೆಲಸವಿಲ್ಲದೇ ಬಹುತೇಕ ವಿಶ್ರಾಂತಿಯಲ್ಲಿ ಕಾಲ ಕಳೆಯಬೇಕಾಗಿತ್ತು. ಬೆಂಕಿಯ ರೂಪದ ಬೆಳಕನ್ನು ಕಂಡುಹಿಡಿದ ಮಾನವ ದಿನದ 16 ಗಂಟೆಗಳ ಕಾಲ ಸಕ್ರಿಯವಾಗಿ ಚಟುವಟಿಕೆಗಳಲ್ಲಿ ತೊಡಗಿರುತ್ತಾನೆ. ಬೆಂಕಿ ಇಲ್ಲದಿದ್ದರೆ ರಾತ್ರಿಯಾದೊಡನೆ ಕತ್ತಲೆ ಆವರಿಸುತ್ತಿತ್ತು. ನಮ್ಮೆಲ್ಲ ಚಟುವಟಿಕೆಗಳು ಸ್ಥಬ್ದವಾಗುತ್ತಿದ್ದವು. ಗುಣಮಟ್ಟದ ನಿದ್ದೆಯಿಲ್ಲದೇ ಕನಸು ಕಾಣಲಾಗುತ್ತಿರಲಿಲ್ಲ. ನಿದ್ದೆಯಿಲ್ಲದೇ ಮೆದುಳು ಸಕ್ರಿಯವಾಗಿ ಕೆಲಸ ಮಾಡುತ್ತಿರಲಿಲ್ಲ. ನೆನಪಿನ ಶಕ್ತಿ ಹಾಳಾಗುತ್ತಿತ್ತು. ನಮ್ಮ ಬುದ್ಧಿವಂತಿಕೆ ಅಭಿವೃದ್ಧಿ ಹೊಂದುತ್ತಲೇ ಇರಲಿಲ್ಲ. ಕತ್ತಲೆಯಲ್ಲಿ ಕ್ರಿಮಿಕೀಟಗಳು ಹಾಗೂ ಇನ್ನಿತರೇ ಅಪಾಯಕಾರಿ ಪ್ರಾಣಿಗಳಿಂದ ನಮ್ಮನ್ನು ರಕ್ಷಿಸುಕೊಳ್ಳುವುದೇ ಪ್ರಯಾಸದ ಕೆಲಸವಾಗುತ್ತಿತ್ತು.

ಬೆಂಕಿಯ ಬಳಕೆ ಪರಿಚಯಿಸಿದ ಬಹುದೊಡ್ಡ ಕಲಿಕೆಯೆಂದರೆ ವೈವಿಧ್ಯಮಯ ಅಡುಗೆ ಕಲೆ. ಮಾಂತ್ರಿಕ ಜ್ವಾಲೆಗಳು ನಮ್ಮ ಜೀವನದಲ್ಲಿ ಬಾರದೇ ಇದ್ದಿದ್ದರೆ ನಮ್ಮ ಇಷ್ಟದ ಪಿಜ್ಜಾ, ಬರ್ಗರ್, ಹಾಟ್ ಚಿಪ್ಸ್, ಸ್ಪೈಸಿ ಕರ್ರಿಗಳನ್ನು ತಿನ್ನಲು ಆಗುತ್ತಲೇ ಇರಲಿಲ್ಲ. ಬರ್ತ್‌ಡೆ ಆಚರಿಸಿಕೊಳ್ಳಲು ಕೇಕ್ ಇರುತ್ತಿರಲಿಲ್ಲ. ಬ್ರೆಡ್, ಬನ್, ಟೋಸ್ಟ್ ಇವುಗಳ ರುಚಿ ಗೊತ್ತಾಗುತ್ತಲೇ ಇರಲಿಲ್ಲ. ಬೆಂಕಿಯ ಉಷ್ಣವು ಹಸಿಮಾಂಸವನ್ನು ಬೇಯಿಸುವುದರ ಜೊತೆಗೆ ಅದರಲ್ಲಿನ ಬ್ಯಾಕ್ಟೀರೀಯಾಗಳನ್ನು ಕೊಲ್ಲುತ್ತದೆ. ಅಂತೆಯೇ ಆಹಾರವನ್ನು ಸುಲಭವಾಗಿ ಅಗಿಯಲು ಸಹಾಯ ಮಾಡುತ್ತದೆ.

ಬೆಂಕಿ ಇಲ್ಲದಿದ್ದರೆ ಮನೆಗಳನ್ನು ಕಟ್ಟಲು ಸುಟ್ಟ ಇಟ್ಟಿಗೆಗಳು ಇರುತ್ತಿರಲಿಲ್ಲ. ಅದಿರನ್ನು ಕರಗಿಸಿ ನಮಗೆ ಬೇಕಾದ ವಸ್ತುಗಳನ್ನು ತಯಾರಿಸಲು ಆಗುತ್ತಿರಲಿಲ್ಲ. ಕೈಗಾರಿಕೆಗಳು ಅಭಿವೃದ್ಧಿಯಾಗುತ್ತಲೇ ಇರಲಿಲ್ಲ. ಕೈಗಾರಿಕೆಗಳು ಇಲ್ಲದೇ ಹೋಗಿದ್ದರೆ ನಾವು ಬಟ್ಟೆ ಇಲ್ಲದೇ ಗಿಡಮರಗಳ ಎಲೆ ಅಥವಾ ಪ್ರಾಣಿಗಳ ತುಪ್ಪಳವನ್ನೇ ಬಟ್ಟೆಯಾಗಿಸಿಕೊಳ್ಳಬೇಕಿತ್ತು. ಶತ್ರುಗಳಿಂದ ರಕ್ಷಿಸಿಕೊಳ್ಳಲು ಹೊಸ ಆಯುಧಗಳು ಇಲ್ಲದೇ ಸಾಯಬೇಕಾಗುತಿತ್ತು. ನಮ್ಮ ದೈನಂದಿನ ಬದುಕು ತುಂಬಾ ನೀರಸವಾಗಿರುತ್ತಿತ್ತು. ಹೊಸ ನಾಗರೀಕತೆ ಮತ್ತು ಹೊಸ ಸಂಸ್ಕೃತಿಗಳ ಉದಯವಾಗುತ್ತಿರಲಿಲ್ಲ. ಜಗತ್ತು ತುಂಬಾ ವಿಶಾಲ ಎನಿಸುತ್ತಿತ್ತು. ಬೇರೆ ರಾಜ್ಯ/ರಾಷ್ಟಗಳ ಜನರೊಂದಿಗಿನ ಸಂಪರ್ಕ, ಸಂವಹನ ಸಾಧ್ಯವಾಗುತ್ತಲೇ ಇರಲಿಲ್ಲ. ಏಕೆಂದರೆ ಬೆಂಕಿ ಇಲ್ಲದಿದ್ದಿದ್ದರೆ ಯಾವ ವಾಹನಗಳು ಆವಿಷ್ಕಾರವಾಗುತ್ತಿರಲಿಲ್ಲ. ಬೆಂಕಿಯ ಬಳಕೆ ಇಲ್ಲದೇ ಹೋಗಿದ್ದರೆ ವಿಜ್ಞಾನ ಮತ್ತು ತಂತ್ರಜ್ಞಾನಗಳು ಅಭಿವೃದ್ಧಿ ಹೊಂದುತ್ತಲೇ ಇರಲಿಲ್ಲ. ಮೊಬೈಲ್, ಕಂಪ್ಯೂಟರ್, ಟಿ.ವಿ, ಇವುಗಳ ಪರಿಚಯವೇ ನಮಗೆ ಇರುತ್ತಿರಲಿಲ್ಲ. ಕಾಡಿನ ಹಣ್ಣು ಹಂಪಲು, ಗಡ್ಡೆ ಗೆಣಸು ತಿನ್ನುತ್ತಾ ನದಿ ನೀರನ್ನು ಕುಡಿಯುತ್ತಾ ಕಾಡಿನ ಇನ್ನಿತರೇ ಪ್ರಾಣಿಗಳಂತೆ ನಾವೂ ಒಂದು ಪ್ರಾಣಿಯಾಗಿ ಇರಬೇಕಾಗಿತ್ತು. ಇಂತಹ ಮಹತ್ತರ ಉಪಯೋಗವುಳ್ಳ ಬೆಂಕಿಗೆ ಮತ್ತು ಅದನ್ನು ಬಳಸಲು ದಾರಿ ಮಾಡಿಕೊಟ್ಟ ನಮ್ಮ ಪೂರ್ವಜರಿಗೆ ಥ್ಯಾಂಕ್ಸ್ ಹೇಳಲೇಬೇಕಲ್ಲವೇ?

# ನಮ್ಮರಿವಿಗೆ ಬರುವುದು ತಡವಾಗಬಹುದು ಜಗಜ್ಜನನಿಗೆ ಗೌರವಿಸಿ ಆರಾಧಿಸಿ

ಚಲನಚಿತ್ರ ಒಂದರಲ್ಲಿ ನಾಯಕಿ ನಟಿ ಹೆಣ್ಣುಮಕ್ಕಳಿಗೆ ಹೆರಿಗೆ ನೋವನ್ನು ದೇವರು ಯಾಕೆ ಕೊಡುತ್ತಾನೆಯೋ ಎಂದು ಬೇಸರ ವ್ಯಕ್ತಪಡಿಸಿದಾಗ ಚಿತ್ರದ ನಾಯಕ ಜಗತ್ತಿನಲ್ಲಿ ಹೆಣ್ಣು ಮಕ್ಕಳಲ್ಲಿರುವಷ್ಟು ಗಟ್ಟಿತನ ಯಾರಲ್ಲೂ ಇಲ್ಲ, ಅಕಸ್ಮಾತ್ ಗಂಡಸರಿಗೇನಾದರೂ ಹೆರಿಗೆಯ ನೋವನ್ನು ಕೊಟ್ಟಿದ್ದರೆ ಯಾವಗಂಡಸೂಕೂಡಮಕ್ಕಳನ್ನುಹುಟ್ಟಿಸುತ್ತಿರಲಿಲ್ಲವಾದ್ದರಿಂದಲೇ ಹೆರಿಗೆಯ ನೋವನ್ನು ಹೆಣ್ಣು ಮಕ್ಕಳಿಗೆ ಕೊಟ್ಟಿರಬಹುದು ಎಂದು ಹೇಳುತ್ತಾನೆ.

ಕೆನ್ನೆಗೆ ಬ್ಲೇಡು ತಾಕಿದರೆ ಅಸಾಧ್ಯ ಉರಿ ಎಂದು ಒದ್ದಾಡುವ ಗಂಡಸರು ತಿಂಗಳ ಆ ದಿನಗಳಲ್ಲಿ ಹೆಣ್ಣು ಮಕ್ಕಳು ಸಹಿಸುವ ರಕ್ತಸ್ರಾವವನ್ನು, ಹೊಟ್ಟೆ ಮತ್ತು ಸೊಂಟದ ನೋವು, ಕೈ ಕಾಲುಗಳಲ್ಲಿನ ಶಕ್ತಿ ಸೋರಿ ಹೋದಂತಾದರೂ ಒದ್ದಾಡುತ್ತಲೇ ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು, ಬಸಿರಿನ ಭಾರವನ್ನು ಹೊತ್ತರೂ ಕೂಡ ಆಗಾಗ ವಿಶ್ರಾಂತಿ ಪಡೆಯುತ್ತಾ ಕೆಲಸ ಕಾರ್ಯಗಳನ್ನು ನಿರ್ವಹಿಸಿ ಕೊನೆಗೆ ತೀವ್ರ ಸ್ವರೂಪದ ಹೆರಿಗೆ ನೋವನ್ನು ಉಂಡು ತನ್ನ ಪ್ರತಿರೂಪವನ್ನು ಈ ಭೂಮಿಗೆ ತರುವ ಪ್ರಕ್ರಿಯೆಗಳಿಂದಲೇ ಹೆಣ್ಣು ಈ ಜಗತ್ತಿನ ಕಣ್ಣು, ಮಾತೃದೇವತೆ, ಜಗಜ್ಜನನಿ ಎಂದೆನಿಸಿಕೊಳ್ಳುತ್ತಾಳೆ.

ಅಂತಹ ಗಟ್ಟಿಗಿತ್ತಿ ಹೆಣ್ಣು ಮಕ್ಕಳು ನಮ್ಮ ಸುತ್ತ ಇದ್ದರೆ, ನಿಮಗಿಂತ ಸುಂದರವಾಗಿದ್ದರೆ ಜಾಣರಾಗಿದ್ದರೆ ಅವರ ಕುರಿತು ಅಸೂಯಾ ಭಾವನೆ ಬೇಡ.. ಬದಲಾಗಿ ಅವರನ್ನು ಗೌರವಿಸಿ,ಆರಾಧಿಸಿ.

ನಿಮ್ಮ ಮನದಾಳದ ಮಾತುಗಳನ್ನು ಕೇಳುವ, ನಿಮ್ಮನ್ನು ಕಾಳಜಿ ಮಾಡುವ, ಈ ಜಗತ್ತಿಗೆ ನಿಮ್ಮನ್ನು ಪರಿಚಯಿಸಿದ, ನಿಮ್ಮ ಸಣ್ಣ ಪುಟ್ಟ ಯಶಸ್ಸನ್ನು ಕೂಡ ಸಂಭ್ರಮಿಸುವ, ನಿಮ್ಮ ತಪ್ಪುಗಳನ್ನು ಮುಖಕ್ಕೆ ಹೊಡೆದಂತೆ ಹೇಳಿ ತಿದ್ದಲು ಪ್ರಯತ್ನಿಸುವ, ಬದುಕಿನ ಹಲವು ನಿಷ್ಠುರ ಸತ್ಯಗಳ ಅರಿವನ್ನು ಮೂಡಿಸುವ ಒಳ್ಳೆಯ ಹೆಣ್ಣು ಮಕ್ಕಳು ನಿಮ್ಮ ಸುತ್ತ ವರಿದಿರುವರು ಅವರನ್ನು ಆದರಿಸಿ. ಅವರ ಮಾತುಗಳನ್ನು ಪಾಲಿಸಿ ಬದುಕಿನಲ್ಲಿ ಮುನ್ನಡೆಯಿರಿ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

ಸದಾ ನಿಮ್ಮ ನೆರಳಿನಂತೆ ಇರುವ, ನಿಮ್ಮ ಕಷ್ಟದಲ್ಲಿ ಹೆಗಲು ಕೊಡುವ ಸುಖದಲ್ಲಿ ಜೊತೆಯಾಗುವ, ಜೀವನದ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ನಿಮ್ಮನ್ನು ಸಜ್ಜಾಗಿಸುವ ಮತ್ತು ನಿಮ್ಮ ದೈನಂದಿನ ಅವಶ್ಯಕತೆಗಳನ್ನು ಪೂರೈಸುವ, ನಿಮ್ಮೆಲ್ಲ ತಪ್ಪುಗಳನ್ನು ಸಹಿಸಿಯೂ ನಿಮ್ಮನ್ನು ಪೊರೆಯುವ, ಜೀವನದಲ್ಲಿ ಎಲ್ಲವೂ ಮುಗಿದು ಹೋಯಿತು ಎಂಬ ಹಂತದಲ್ಲಿಯೂ ನಾನಿರುವೆ ನಿನ್ನ ಜೊತೆ ಎಂಬ ಕಟ್ಟ ಕಡೆಯ ಭರವಸೆಯನ್ನು ನೀಡುವ ತಾಯಿ ರೂಪದ ಹೆಣ್ಣಿನ ಪ್ರೀತಿಯ ಜಾಲದಲ್ಲಿ ಸುರಕ್ಷಿತತೆಯ ಅನುಭವ ಪಡೆಯಿರಿ. ಅವರ ಮಾನಸಿಕ ನೋವು ನಲಿವುಗಳನ್ನು ನೀವು ಕೂಡ ಹಂಚಿಕೊಂಡು ಅವರನ್ನು ಪ್ರೀತಿಸಿ, ಆರಾಧಿಸಿ.

ನಿಮಗಿಂತ ಮುಂಚೆ ಇಲ್ಲವೆ ನಂತರ ಹುಟ್ಟಿ ನಿಮ್ಮೊಂದಿಗೆ ಆಡಿ ಬೆಳೆಯುವ, ಒಡನಾಡುವ, ಜಗಳ ಮತ್ತು ಪ್ರೀತಿಯನ್ನು ಒಟ್ಟೊಟ್ಟಿಗೆ ಅನುಭವಿಸುತ್ತಾ ಸುಂದರ ಬಾಲ್ಯವನ್ನು ಕಳೆದು, ಅಪ್ಪ ಅಮ್ಮರ ಕಟ್ಟುನಿಟ್ಟಾದ ಶಿಸ್ತಿನಿಂದ ನಿಮ್ಮನ್ನು ಸಂರಕ್ಷಿಸುವ,

ತನ್ನ ಪಾಕೆಟ್ ಮನಿಯ ಅರ್ಧವನ್ನು ನಿಮಗೆ ನಸು ಮುನಿಸಿನಿಂದಲೇ ನೀಡುವ, ಎಂದೂ ಮರಳಿ ನೀಡುವುದಿಲ್ಲ ಎಂಬ ಖಾತರಿಯಿದ್ದು ಕೂಡ ಪ್ರತಿ ಪೈಸೆಯನ್ನು ಲೆಕ್ಕ ಇಡುವ, ನಿಮ್ಮೆಲ್ಲಾ ತಪ್ಪುಗಳನ್ನು ಉದಾರವಾಗಿ ಕ್ಷಮಿಸುವ, ಹಂಚಿ ತಿನ್ನುವ ಜೀವನದ ಕೊನೆಯವರೆಗೂನಿಮ್ಮೊಂದಿಗೆಆತ್ಮೀಯತೆಯ ಬಾಂಧವ್ಯವನ್ನು ಹೊಂದಿ ನಿಮ್ಮ ಏಳಿಗೆಯನ್ನು ಬಣ್ಣಿಸಿ ಹೇಳುವ ಜೀವವನ್ನು ಎಂದೂ ನೋಯಿಸದಿರಿ. ಬಹುಶಃ ತಾಯಿಯ ನಂತರ ದೇವರು ಕೊಟ್ಟ ಮತ್ತೊಂದು ವರ ಆಕೆ ಎಂಬುದು

ನಮ್ಮರಿವಿಗೆಬರುವುದುತಡವಾಗಬಹುದು... ಆಕೆಯ ಪ್ರೀತಿ ವಾತ್ಸಲ್ಯ ಮಮತೆಯನ್ನು ಭರಪೂರ ಆನಂದಿಸಿ ಕೀಟಲೆ, ಉಪಟಳಗಳನ್ನು ಸಹಿಸಿ. ಜೀವನದ ಏರುಗಾಲದಲ್ಲಿ ನಿಮಗೆ ಆಕೆಯ ನೆನಪಾಗದಿದ್ದರೂ ಬದುಕಿನ ಮುಸ್ಸಂಜೆಯನ್ನು ಕಳೆಯಲು ಇಂತಹ ನೆನಪುಗಳು, ಪ್ರೀತಿ ವಾತ್ಸಲ್ಯದ ಆಹ್ಲಾದಕರ ಅನುಭವಗಳು ನಿಮ್ಮದಾಗಿರಲಿ.

ನಿಮ್ಮ ಜೀವನವನ್ನು ಅತ್ಯಂತ ಸರಳವಾಗಿಸುವ, ನಿಮ್ಮ ನೆರಳನ್ನು ಕೂಡ ಪ್ರೀತಿಸುವ, ತಾವು ಸುಂದರವಾಗಿದ್ದರೂ ನಿಮ್ಮನ್ನು ಹೊಗಳುವ, ನಿಮ್ಮ ಒಂದು ಪ್ರೀತಿಯ ಮಾತಿಗೆ, ಒಲುಮೆಯ ನೋಟಕ್ಕೆ ಕಾತರಿಸುವ ಪತ್ನಿಯ ಪ್ರೀತಿ ಮತ್ತು ವಿಶ್ವಾಸಕ್ಕೆ ಪಾತ್ರರಾಗಿ.

ಬೇರೊಬ್ಬ ತಾಯಿಯ ಮಗಳಾಗಿ ಹುಟ್ಟಿ ನಿಮ್ಮ ಜೀವನದಲ್ಲಿ ತಂಗಾಳಿಯಾಗಿ ಬಂದು ನಿಮಗೆ ಪ್ರೀತಿ ಪ್ರೇಮದ ಅನುಭವ ನೀಡುವ, ನಿಮ್ಮ ಹೆತ್ತವರಿಗೆ ಆಸರೆಯಾಗುವ ಮಕ್ಕಳನ್ನು ಹೆತ್ತು ನಿಮ್ಮ ವಂಶೋದ್ಧಾರ ಮಾಡುವ, ಹಲವು ಬಾರಿ ನಸು ಮುನಿದರೂ ತನ್ನೆದೆಯ ಕಾವಿನಲ್ಲಿ ನಿಮ್ಮನ್ನು ಬೆಚ್ಚಗಿಡುವ, ಏನನ್ನು ಕೇಳದೆಯೂ ಎಲ್ಲವನ್ನು ಕೂಡ ಮಾಡುವ ಆ ಜೀವಕ್ಕೆ ಋಣಿಯಾಗಿರಿ.

ಅತ್ಯಂತ ಧೈರ್ಯಶಾಲಿಯಾದ, ದಿಟ್ಟವಾಗಿ ಮಾತನಾಡುವ ಮೂಲಕ ವ್ಯಕ್ತಿಗಳ ನಡುವಿನ ಅನುಮಾನದ ಗೋಡೆಗಳನ್ನು ಒಡೆದು ಹಾಕುವ, ನಿಷ್ಟುರ ಸತ್ಯಗಳನ್ನು ಹೊರ ಹಾಕುವ, ಮಾತಿನಲ್ಲಿ ಒರಟಾದರೂ ಮನೆ ಮಂದಿಯೆಲ್ಲರ ಕಾಳಜಿ ಮಾಡುವ, ತನ್ನ ವೈಯುಕ್ತಿಕ ನಿರ್ಣಯಗಳಿಗೆ ಬೇರೊಬ್ಬರ ಸಮ್ಮತಿಗಾಗಿ ಕಾಯದ, ತೊಟ್ಟಿಲು ತೂಗಿದ ಕೈಯಿಂದ ಇಡೀ ಮನೆಯ ಜವಾಬ್ದಾರಿಯನ್ನು ಸಂಭಾಳಿಸುವ ಜೀವವನ್ನು ಆರಾಧಿಸಿ.

ನಿಮ್ಮನ್ನು ನೀವು ಇರುವಂತೆಯೇ ಒಪ್ಪಿ ಅಪ್ಪುವ ನಿಮ್ಮ ವ್ಯಕ್ತಿತ್ವದ



ಭಾಗವೇ ಆಗುವ ಜೀವವನ್ನು ಪ್ರೀತಿಸಿ.ನಿಮ್ಮ ಹೆತ್ತವರನ್ನು ನೆನಪಿಸುವ, ನಿಮ್ಮ ಇಳಿಗಾಲದಲ್ಲಿ ಆಸರೆಯಾಗುವ, ನಿಮ್ಮನ್ನು ಕಾಳಜಿಯಿಂದ ನೋಡಿಕೊಳ್ಳುವ ನೀವು ಮಾಡುವ ಸಣ್ಣ ಪುಟ್ಟ ಸಾಧನೆಗಳನ್ನು ದೊಡ್ಡದು ಎಂಬಂತೆ ಬಿಂಬಿಸಿ ಅಭಿಮಾನದಿಂದ ಕಣ್ಣರಳಿಸುವ ಆ ಪುಟ್ಟ ಜೀವವನ್ನು ಎಂದಿಗೂ ನೋಯಿಸದಿರಿ ಬೇಯಿಸದಿರಿ.

ಸ್ನೇಹಿತರೇ, ಬದುಕು ಬಹಳ ಚಿಕ್ಕದು. ಸಣ್ಣ ಪುಟ್ಟ ಕಾರಣಗಳಿಗೆ ಮನಸ್ಸನ್ನು ಕಹಿ ಮಾಡಿಕೊಂಡು ನಾವೂ ನೊಂದು ನಮ್ಮವರನ್ನು ನೋಯಿಸುವ ಬದಲು, ಇದ್ದುದರಲ್ಲಿಯೇ ಹೊಂದಾಣಿಕೆಯ ಬದುಕನ್ನು ನಡೆಸುವುದು ಇಂದಿನ ಬದುಕಿನ ಅಗತ್ಯತೆಗಳಲ್ಲಿ ಒಂದು ಎಂಬುದನ್ನು ಅರಿತು ಸಾರ್ಥಕ ಬದುಕನ್ನು ಸಾಗಿಸೋಣ.

Printed by: MANJUNATHA .H .B Published by: A. SHUBHA. Owned by: A. SHUBHA and Printed at: AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at: At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor: BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಅಣಬೆ



ಮಳೆ ಬಿದ್ದಾಗ ಏಳುವೆ
ಕೊಡೆಯಂತೆ ಕಾಣುವೆ
ವಿಧಗಳಿವೆ ಹಲವು
ವಿಷಪೂರಿತವು ಕೆಲವು

ನಾಯಿ ಕೊಡೆ ಅಥವಾ ಅಣಬೆ
ಕರೆಯುವರು ನಿನ್ನ
ನೋಡಲು ಚೆನ್ನ
ಮಾಡುವರು ವಿವಿಧ ಅಡುಗೆ

ತಿನ್ನಲು ರುಚಿಯಂತೆ
ಕೊಳ್ಳಲು ದುಬಾರಿಯಂತೆ
ಆದರೂ ಇಷ್ಟ ಪಟ್ಟು
ಕೊಂಡು ತಿನ್ನುವರು ಹಲವರು.

– ಸುವರ್ಣಾ ಭಟ್ಟ

### ಮಡದಿ

ದುಂಬಿಯು ಮಕರಂದವ ಹೀರಿದಂತೆ ವನದಿ
ಪ್ರೀತಿಯ ಧಾರೆ ಎರೆಯುವಳು ಮಡದಿ
ಅವಳಿಗಾಗಿ ಮೀಸಲಿಡುವುದಿಲ್ಲ ಸಮಯ ದಿನದಿ
ಆದರೂ ಕಾಣಲಿಲ್ಲ ಎಂದೂ ಅಸಹನೆ ಮೊಗದಿ

ಮನೆ ಮಕ್ಕಳ ಆರಾಧಿಸುವಳು ಹೃದಯದಿ
ತಾನುರಿದು ಬೆಳಕ ಕೊಡುವಳು ದೀಪದ ತೆರದಿ
ಭವಿಷ್ಯಕ್ಕಾಗಿ ರೂಪಿಸುವಳು ಭದ್ರ ಬುನಾದಿ
ಮಡದಿ ಜೊತೆಯಿರಲು ಸರಾಗವು
ಬಾಳಹಾದಿ

ಮಡದಿಯೇ ಬಾಳಿನ ಆಪ್ತ ಗೆಳತಿ
ಕಷ್ಟ ಸುಖಕ್ಕೆ ಹೆಗಲು ಕೊಡುವ ಸಂಗಾತಿ
ಬದುಕಿಗೆ ಬೆಳಕನು ನೀಡುವ ಜ್ಯೋತಿ
ಸಂಸಾರದ ನೌಕೆಯ ನಡೆಸುವ ಸಾರಥಿ

– ಚೇತನ ಭಾರ್ಗವ, ಬೆಂಗಳೂರು

ಮಕ್ಕಳ ಜ್ಞಾನಭಂಡಾರ ಹೆಚ್ಚಿಸಲು ಇರಲಿ ಮನೆಗೊಂದು ದಿನಪತ್ರಿಕೆ
ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನಗಳು
ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ
ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
99029 09399, 99805 59681
97407 42251, 80735 89125


## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**07–12–2024 – ಶನಿವಾರ**

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಧನಿಷ್ಠ |
| ಯೋಗ | : ವ್ಯಾಘಾತ |
| ಕರಣ | : ಹರ್ಷಣ |
| ಸೂರ್ಯೋದಯ | : 06:56:53 |
| ಸೂರ್ಯಾಸ್ತ | : 17:40:13 |
| ರಾಹು ಕಾಲ | : 09:38–10:58 |
| ಯಮಘಂಡ ಕಾಲ | : 13:39–14:59 |
| ಗುಳಿಕ ಕಾಲ | : 06:57–08:17 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 06–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.53 ಅಡಿ |
| ಒಳ ಹರಿವು | 4141 ಕ್ಯುಸೆಕ್ |
| ಹೊರ ಹರಿವು | 5204 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 92.313 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1592.21 ಅಡಿ |
| ಒಳ ಹರಿವು | 644 ಕ್ಯುಸೆಕ್ |
| ಹೊರ ಹರಿವು | 2319 ಕ್ಯುಸೆಕ್ |
| ಸಾಮರ್ಥ್ಯ | 12.976 ಟಿಎಂಸಿ |

# ಸಂವಿಧಾನದಲ್ಲಿದೆ ಸಮಾನತೆಯ ಮಹತ್ವ

## ಕನ್ನಡ ವಿಶ್ವವಿದ್ಯಾ ಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಮೊಗಳ್ಳಿ ಗಣೇಶ್ ಹೇಳಿಕೆ। ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನಾಚರಣೆ

■ ಹಂಪಿ ಟೈಮ್ಸ್ ಹೊಸಪೇಟೆ

ಭಾರತೀಯ ಸಂವಿಧಾನದಲ್ಲಿ ಮನುಷ್ಯತ್ವಕ್ಕೆ, ಮನುಷ್ಯ ಸಮಾನತೆಗೆ ಮತ್ತು ಮಹಿಳೆಯರ ಘನತೆಯ ಬದುಕಿಗೆ ಅವಕಾಶ ಮಾಡಿಕೊಟ್ಟ ಮಹಾ ಮಾನವತವಾದಿ ಡಾ.ಬಿ.ಆರ್ ಅಂಬೇಡ್ಕರ್ ಎಂದು ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಮೊಗಳ್ಳಿ ಗಣೇಶ್ ಅವರು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಪಂಪ ಸಭಾಂಗಣದಲ್ಲಿ ಶುಕ್ರವಾರ ದಲಿತ ಸಂಸ್ಕೃತಿ ಅಧ್ಯಯನ ಪೀಠದ ವತಿಯಿಂದ ಹಮ್ಮಿಕೊಂಡಿದ್ದ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 68ನೇ ಮಹಾಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಬುದ್ಧನ ಕಾರುಣ್ಯ ಮತ್ತು ವೈಜ್ಞಾನಿಕ ಮನೋಧರ್ಮಕ್ಕೆ ಒತ್ತು ನೀಡಿದ್ದಾರೆ. ಜನ ಸಾಮಾನ್ಯರ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಮಾನತೆಗೆ ಮಹತ್ವ ನೀಡಿದ್ದಾರೆ. ಮಹಾ ಪರಿನಿರ್ವಾಣ ಎಂದರೆ ಎಚ್ಚರಿಕೆ, ಹೊಸ ಬಗೆಯ ಶೋಧ, ಸೃಷ್ಠಿ, ಆಯಾಮ, ಜ್ಞಾನೋದಯ, ಸ್ವಾತಂತ್ರ್ಯ ಎಂಬುದಾಗಿದೆ. ವಿಶಾಲಾರ್ಥದಲ್ಲಿ ನೋಡುವುದಾದರೆ ಜೀವನದ ಲೌಖಿಕ ಜಂಜಾಟಗಳಿಂದ ಮುಕ್ತರಾಗಿ ಸ್ವಾತಂತ್ರ್ಯವನ್ನು ಪಡೆದು ಕೊಳ್ಳುವುದೇ ಪರಿನಿರ್ವಾಣವಾಗಿದೆ. ಮಹಾ ಪರಿ ನಿರ್ವಾಣವು ಬುದ್ಧ ಮತ್ತು ಅಂಬೇಡ್ಕರ್ ಅವರಿಗೆ ಮಾತ್ರ ಸೀಮಿತವಾಗದೇ, ಪ್ರತಿಯೊಬ್ಬರಲ್ಲೂ ಎಚ್ಚರಿಕೆಯ ಪರಿನಿ ರ್ವಾಣ ನಿರ್ಮಾಣಗೊಳ್ಳಬೇಕು ಎಂದು ಹೇಳಿದರು.




ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ. ವಿಜಯ್ ಪೂಣಚ್ಚ ತಂಬಂಡ ಅವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತ, ಅಂಬೇಡ್ಕರ್ ಎಲ್ಲ ವಿಷಯಗಳಲ್ಲೂ ಪರಿಣಿತರಾಗಿದ್ದಾರು. ಹಲವಾರು ಭಾಷೆಗಳನ್ನು ಕರಗತ ಮಾಡಿಕೊಂಡಿದ್ದರು. ದೇಶದ ಅರ್ಥವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ, ಜನ ಸಮುದಾಯಗಳ ಮತ್ತು ಮಹಿಳೆಯರ ಸ್ಥಾನಮಾನ ಹೇಗಿರಬೇಕು ಎಂಬ ಸ್ಪಷ್ಟ ಕಲ್ಪನೆ ಅವರಿಗಿತ್ತು. ಇಂದು ನಾವು ಅಂಬೇಡ್ಕರ್ ಅವರನ್ನು ಹೃದಯದಲ್ಲಿಟ್ಟು ಕೊಂಡು ಪೂಜಿಸುತ್ತಿದ್ದೇವೆ, ಆದರೆ ಅವರ ವಿಚಾರಗಳನ್ನು ಅಳವಡಿಸಿಕೊಳ್ಳುವಲ್ಲಿ, ಪಾಲಿಸುವಲ್ಲಿ ಹಿಂದುಳಿದ್ದಿದ್ದೇವೆ. ಸಂಶೋಧನೆಗಳಲ್ಲಿ ಮೇಲ್ನೋಟಕ್ಕೆ ಮಾತ್ರ ಅಂಬೇಡ್ಕರ್ ಅವರ ಉಲ್ಲೇಖ ಕಂಡು ಬರುತ್ತಿದ್ದು, ಅವರ ಒಳಗಿನ ಅಂತಃಸತ್ವಗಳ ಬಗ್ಗೆ ಚರ್ಚಿಸಿದ್ದು ತುಂಬಾ ಕಡಿಮೆ. ಇನ್ನು ಮುಂದಾದರೂ ಅಂಬೇಡ್ಕರ್ ಅವರ ವಿಚಾರಗಳನ್ನು, ಚಿಂತನೆಗಳನ್ನು ವರ್ಷವಿಡಿ ಆಳವಾಗಿ ಅಧ್ಯಯನ ಮಾಡುವಂತಾಗಲಿ ಎಂದು ಆಶಿಸಿದರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಬುದ್ಧ ಮತ್ತು ಅಂಬೇಡ್ಕರ್ ಅವರು ಆತ್ಮವಂಚನೆ ಮತ್ತು ಸಮುದಾಯ ವಂಚನೆಗಳನ್ನು ತೊರೆದವರು. ಆದರೆ ಇಂದು ನಾವು ಎಷ್ಟೇ ವಿದ್ಯಾವಂತರಾದರೂ, ಬುದ್ಧಿವಂತರಾದರೂ ಆತ್ಮವಂಚನೆ ಮತ್ತು ಸಮುದಾಯದ ವಂಚನೆಯನ್ನು ಮಾಡಿಕೊಂಡು ಬಂದಿದ್ದೇವೆ. ನಮ್ಮತನವನ್ನು ಮರೆತು, ಮೊದಲು ನಾನು ಸರಿಯಾಗಬೇಕೆಂಬುದನ್ನು ಬಿಟ್ಟು, ಸಮಾಜ ಸರಿಯಾಗಲಿ ಎಂದು ಆಶಿಸುತ್ತಿದ್ದೇವೆ. ಇದು ಸರಿಯಾದ ಆಲೋಚನೆಯಲ್ಲ. ಮೊದಲು ನಾವು ಸರಿಯಾದರೆ, ಸಮಾಜ ತಾನಾಗಿಯೇ ಸರಿಯಾಗುತ್ತದೆ ಎಂದರು.

ದಲಿತ ಸಂಸ್ಕೃತಿ ಅಧ್ಯಯನ ಪೀಠದ ಸಂಚಾಲಕರಾದ ಡಾ.ಚಿನ್ನಸ್ವಾಮಿ ಸೋಸಲೆ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತ, ಆಧುನಿಕ ಭಾರತದ ಬಹುದೊಡ್ಡ ಅನುಭಾವಿ ಅಂಬೇಡ್ಕರ್. ಸಾಂಪ್ರದಾಯಿಕ ಭಾರತವನ್ನು ವೈಜ್ಞಾನಿಕ ಭಾರತವನ್ನಾಗಿ ರೂಪಿಸುವಲ್ಲಿ ಅಂಬೇಡ್ಕರ್ ಅವರ ಪಾತ್ರ ಮಹತ್ವದ್ದು. ಅಂಬೇಡ್ಕರ್ ಅವರ ನಡೆಸಿದ ಮಹಾದ್ ಕೆರೆ ಚಳುವಳಿ, ಕಾಳರಾಂ ದೇವಾಲಯ ಪ್ರವೇಶ ಹೋರಾಟಕ್ಕೆ 100 ವರ್ಷ ತುಂಬುವ ಆಸುಪಾಸಿನಲ್ಲಿದ್ದರೂ ಇಂದಿಗೂ ಜಾತಿ ಕಾರಣದಿಂದ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳು ಜೀವಂತವಾಗಿವೆ. ಈ ಹಿನ್ನೆಲೆಯಲ್ಲಿ ತಳ ಸಮುದಾಯಗಳು ಪ್ರಜ್ಞಾವಂತರಾಗಬೇಕು ಎಂದು ಅಭಿಪ್ರಾಯಪಟ್ಟರು.


ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿಗಳು, ಸಂಶೋಧನಾರ್ಥಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯ ಕ್ರಮದಲ್ಲಿ ಚರಿತ್ರೆ ಅಧ್ಯಯನ ವಿಭಾಗದ ಸಂಶೋಧನಾರ್ಥಿ ಸಾವಿತ್ರಿ ಅವರು ನಿರೂಪಿಸಿ, ವಂದಿಸಿದರು.

# ಇಂದು ನಾಳೆ ಕಮಲಾಪುರದಲ್ಲಿ ಗ್ರಾಮದೇವತೆ ಜಾತ್ರೋತ್ಸವ

■ ಹಂಪಿ ಟೈಮ್ಸ್ ಹೊಸಪೇಟೆ

ತಾಲೂಕಿನ ಕಮಲಾಪುರದಲ್ಲಿ ಡಿ.07 ಮತ್ತು 08ರಂದು ಗ್ರಾಮದೇವತೆ ಶ್ರೀ ಊರಮ್ಮ ದೇವಿ ಜಾತ್ರಾ ಮಹೋತ್ಸವ ಜರುಗಲಿದೆ.

ಐದು ವರ್ಷಕ್ಕೊಮ್ಮೆ ನಡೆಯುವ ಜಾತ್ರಾ ಮಹೋತ್ಸವದ ನಿಮಿತ್ತ ಶ್ರೀ ಊರಮ್ಮ ದೇವಿ ದೇಗುಲದಲ್ಲಿ ಡಿ.07ರಂದು ಮಹಾಗಣಾಪತಿ ಪೂಜೆ, ಚಂಡಿಹೋಮ, ಪ್ರಾರಂಭೋತ್ಸವ ನಡೆಯಲಿದೆ. ಡಿ.08ರಂದು ಬೆಳಗ್ಗೆ ಗಂಗೆ ಪೂಜೆ, ತನುಕೊಡ ತರುವುದು. ಮೂಲದೇವತಾ ಪ್ರಾರ್ಥನೆ, ಅಭಿಷೇಕ ಮತ್ತು ಚಂಡಿಹೋಮ ಪೂರ್ಣಹುತಿ. ಮಹಮಂಗಳಾರತಿ ಹಾಗೂ 11 ಗಂಟೆ ನಂತರ ಅನ್ನಸಂತರ್ಪಣೆ ಸೇರಿದಂತೆ ಇತರೆ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ ಎಂದು ದೇಗುಲದ ಆಡಳಿತ ಮಂಡಳಿಯಿಂದ ತಿಳಿಸಲಾಗಿದೆ.



# ಮಾನವ ಹಕ್ಕುಗಳ ದಿನಾಚರಣೆ : ಜಿಲ್ಲಾ, ತಾಲೂಕು ಕಚೇರಿಗಳಲ್ಲಿ ಕಡ್ಡಾಯ ಆಚರಣೆಗೆ ಆದೇಶ

■ ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲೆಯ ಎಲ್ಲಾ ಜಿಲ್ಲಾ ಮತ್ತು ತಾಲೂಕು ಕೇಂದ್ರದ ಕಚೇರಿಯಲ್ಲಿ ಕಡ್ಡಾಯವಾಗಿ ಡಿಸೆಂಬರ್ 10 ರಂದು ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮ ಆಚರಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರ ಅದೇಶಿಸಿದ್ದಾರೆ.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಪ್ರತಿ ಜಿಲ್ಲೆಯಲ್ಲಿ ಮತ್ತು ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಮಾನವ ಹಕ್ಕುಗಳ ದಿನಾಚರಣೆಯನ್ನು ಪ್ರತೀ ವರ್ಷದಂತೆ ಈ ವರ್ಷವೂ ಸಹ ವಿಶೇಷವಾಗಿ ಮಾನವ ಹಕ್ಕುಗಳ ದಿನಾಚರಣೆಯನ್ನು ಆಚರಿಸಲು ಆಯೋಗವು ನಿರ್ಧಾರವನ್ನು ಕೈಗೊಂಡಿದ್ದು, ಆಯೋಗದ ನಿರ್ದೇಶನದಂತೆ, ಡಿಸೆಂಬರ್ 10 ರಂದು ಎಲ್ಲಾ ಇಲಾಖೆಗಳ ಕಚೇರಿಗಳಲ್ಲಿ ಮಾನವ ಹಕ್ಕುಗಳ ದಿನಾಚರಣೆ ಆಚರಿಸಬೇಕು ಎಂದು ಜಿಲ್ಲಾಧಿಕಾರಿಯವರು ತಿಳಿಸಿದ್ದಾರೆ.

# ಪಿಡಿಓ ಪರೀಕ್ಷಾರ್ಥಿಗಳಿಗೆ ಸೂಚನೆ

## ಕಡ್ಡಾಯ ಕನ್ನಡ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳು ಪ್ರಾಧಿಕಾರದ ಸೂಚನೆಗಳನ್ನು ಪಾಲಿಸಿ

■ ಹಂಪಿ ಟೈಮ್ಸ್ ಹೊಸಪೇಟೆ

ಡಿಸೆಂಬರ್ 7 ಮತ್ತು 8 ರಂದು ನಡೆಯುವ ಉಳಿಕೆ ವೃಂದ ಮೂಲದ ಪಿಡಿಓ ಹುದ್ದೆಯ ನೇಮಕಾತಿ ಪರೀಕ್ಷೆಗಳಾದ ಕಡ್ಡಾಯ ಕನ್ನಡ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳು ಪ್ರಾಧಿಕಾರದ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ತಿಳಿಸಿದ್ದಾರೆ.

ಸೂಚನೆಗಳು: ಅಭ್ಯರ್ಥಿಗಳು ಪರೀಕ್ಷೆ ಆರಂಭಕ್ಕೂ ಎರಡು ಗಂಟೆ ಮುಂಚಿತವಾಗಿ ಕಡ್ಡಾಯವಾಗಿ ಪರೀಕ್ಷಾ ಉಪಕೇಂದ್ರದ ಬಳಿ ಹಾಜರಿರಬೇಕು. ಬೆಳಿಗ್ಗೆ 8 ಮತ್ತು ಮಧ್ಯಾಹ್ನ 12 ಗಂಟೆಯೊಳಗಾಗಿ ಹಾಜರಿರಬೇಕು. ಬೆಳಗಿನ ಪರೀಕ್ಷೆಗೆ 9:50ರ ನಂತರ ಮತ್ತು ಮಧ್ಯಾಹ್ನದ ಪರೀಕ್ಷೆಗೆ 1:50 ರ ನಂತರ ಬರುವ ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ನೀಡಲಾಗುವುದಿಲ್ಲ.

ಗುರುತು ಪತ್ತೆ ಹಚ್ಚಲು ಸಾಧ್ಯವಾಗದ ರೀತಿಯಲ್ಲಿ ವಸ್ತ್ರಧರಿಸಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು, ಪರೀಕ್ಷಾ ಕೇಂದ್ರದಲ್ಲಿ ಫ್ರಿಸ್ಕಿಂಗ್ ನಡೆಸುವ ಸಿಬ್ಬಂದಿಯೊಂದಿಗೆ ಮತ್ತು ಪರೀಕ್ಷಾ ಕೊಠಡಿಯ ವೀಕ್ಷಕರೊಂದಿಗೆ ಸಹಕರಿಸಿ ತಪಾಸಣೆಗೊಳಗಾಗುವುದು ಕಡ್ಡಾಯವಾಗಿರುತ್ತದೆ. ಪರೀಕ್ಷೆಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳು ಆಯೋಗವು ನಡೆಸುವ ಹ್ಯಾಂಡ್ ಹೆಲ್ಡ್ ಮೆಟಲ್ ಡಿಟೆಕ್ಟರ್ ತಪಾಸಣೆಗೆ ಒಳಗಾಗುವುದು ಕಡ್ಡಾಯವಾಗಿರುತ್ತದೆ. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಗಳು ಒಂದೊಮ್ಮೆ ಶೌಚಾಲಯಕ್ಕೆ ಹೋಗಿಬಂದಲ್ಲಿ ಪುನ: ತಪಾಸಣೆಗೆ ಒಳಗಾಗಿಯೇ ಕೊಠಡಿ ಪ್ರವೇಶಿಸಲು ಅನುಮತಿಸಲಾಗಿದೆ. ಘನ ಮತ್ತು ಘನ ವಸ್ತುವಲ್ಲದ ನೀರಿನ ಬಾಟಲಿಯನ್ನು ನಿಷೇಧಿಸಲಾಗಿದೆ. ಕಿವಿ, ಬಾಯಿ ಮುಚ್ಚಿಕೊಳ್ಳುವಂತೆ ಅಥವಾ ಯಾವುದೇ ರೀತಿಯ ಫಿಲ್ಟರ್ ಇರುವ ಫೇಸ್ ಮಾಸ್ಕ್ ಧರಿಸಿ ಪರೀಕ್ಷಾ ಕೊಠಡಿ ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.

ಅಭ್ಯರ್ಥಿಗಳು ತರುವ ಯಾವುದೇ ವಸ್ತುಗಳು ಬ್ಯಾಗ್, ಫೋನ್, ಸೆಲ್ಯೂಲಾರ್ ಫೋನ್, ಟ್ಯಾಬ್ಲೆಟ್, ಪೆನ್ ಡ್ರೈವ್, ಬ್ಲೂ ಟೂತ್ ಡಿವೈಸ್, ಸ್ಮಾರ್ಟ್ ವಾಚ್, ಕ್ಯಾಲ್ಕು ಲೇಟರ್ ಮತ್ತು ಇತರೆ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳು ಅಥವಾ ಲಾಗ್ ಟೇಬಲ್ಸ್, ಕೈಚೀಲ, ಪರ್ಸ್, ನೋಟುಗಳು, ಚಾರ್ಟ್, ಬಿಡಿ ಹಾಳೆಗಳು ಅಥವಾ ರೆಕಾರ್ಡಿಂಗ್ ವಸ್ತುಗಳೂ ಸೇರಿದಂತೆ ಇನ್ನಿತರೆ ಯಾವುದೇ ರೀತಿಯ ಉಪಕರಣಗಳು, ಇನ್ನಿತರೆ ವೈಯಕ್ತಿಕ ಅಮೂಲ್ಯ ವಸ್ತುಗಳನ್ನು ಪರೀಕ್ಷಾ ಉಪ ಕೇಂದ್ರದಲ್ಲಿ ಭದ್ರವಾಗಿ ಇಡಲು ಯಾವುದೇ ವ್ಯವಸ್ಥೆ ಇರುವುದಿಲ್ಲ. ಹಾಗೂ ಇದಕ್ಕೆ ಪರೀಕ್ಷಾ ಉಪಕೇಂದ್ರದವರು ಜವಾಬ್ದಾರರಾಗುವುದಿಲ್ಲ.



ಧಾರ್ಮಿಕ ಆಚರಣೆಗೆ ಸಂಬಂಧಿಸಿದ ಒಂದು ವಸ್ತುಗಳನ್ನು ಧರಿಸಿರುವ ಅಭ್ಯರ್ಥಿಗಳು ಹಾಗೂ ಶ್ರವಣ ಸಾಧನ ಧರಿಸಿರುವ ಅಭ್ಯರ್ಥಿಗಳು ವೈದ್ಯಕೀಯ ದಾಖಲೆಗಳೊಂದಿಗೆ ಪರೀಕ್ಷೆ ಪ್ರಾರಂಭವಾಗುವ ಎರಡು ಗಂಟೆ ಮುಂಚಿತವಾಗಿ ಸಂಪೂರ್ಣ ವಿಶೇಷ ತಪಾಸಣೆಗೆ ಒಳಪಡಬೇಕಾಗಿರುತ್ತದೆ.

**ವಸ್ತ್ರ ಸಂಹಿತೆ:** ತುಂಬು ತೋಳಿನ ಶರ್ಟ್, ಟಿ–ಶರ್ಟ್, ಪದರಗಳುಳ್ಳ ವಿವಿಧ ರೀತಿಯ ವಿನ್ಯಾಸವುಳ್ಳ ವಸ್ತ್ರಗಳನ್ನು ಧರಿಸುವುದು ನಿಷೇಧಿಸಿದೆ. ಹಾಗೂ ಸರಳ ಉಡುಪು ಧರಿಸಿ ಪರೀಕ್ಷೆಗೆ ಹಾಜರಾಗುವುದು.

ಯಾವುದೇ ರೀತಿಯ ಆಭರಣಗಳನ್ನು ಧರಿಸುವಂತಿಲ್ಲ (ಮಂಗಳ ಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ) ಶೂ ಮತ್ತು ಸಾಕ್ಸ್ ಧರಿಸುವುದನ್ನು ನಿಷೇಧಿಸಿದೆ. ಹಾಗೂ ಸರಳ ಚಪ್ಪಲಿಗಳನ್ನು ಧರಿಸಿ ಹಾಜರಾಗುವುದು.

ಅಭ್ಯರ್ಥಿಗಳು ಕಡ್ಡಾಯವಾಗಿ ತರಬೇಕಾದ ದಾಖಲೆಗಳು: ಪರೀಕ್ಷೆಯ ಪ್ರವೇಶ ಪತ್ರ, ಮೂಲ ಗುರುತಿನ ಚೀಟಿ, ಪಾಸ್‌ಪೋರ್ಟ್ ಅಥವಾ ಸ್ಟ್ಯಾಂಪ್ ಅಳತೆಯ 2 ಫೋಟೋಗಳನ್ನು ತರಬೇಕು. ಅಂಗವಿಕಲ ಅಭ್ಯರ್ಥಿಗಳು ನಿಗದಿತ ಅಂಗವಿಕಲ ಪ್ರಮಾಣ ಪತ್ರ ಹಾಜರುಪಡಿಸುವುದು. ಪ್ರವೇಶ ಪತ್ರದ ಜೊತೆಗೆ ಕಪ್ಪು ಬಣ್ಣದ ಬಾಲ್ ಪಾಯಿಂಟ್ ಪೆನ್ನನ್ನು ತರತಕ್ಕದ್ದು. ಸೂಚನೆಗಳನ್ನು ಉಲ್ಲಂಘಿಸಿದಲ್ಲಿ, ಅದಕ್ಕೆ ಸಂಪೂರ್ಣವಾಗಿ ಅಭ್ಯರ್ಥಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

ಪರೀಕ್ಷೆಗೆ ನಿಗದಿಪಡಿಸಿದ ಪೂರ್ಣ ಅವಧಿಯು ಮುಗಿಯುವವರೆಗೆ ಯಾವುದೇ ಅಭ್ಯರ್ಥಿಯು ಹೊರ ಹೋಗುವಂತಿಲ್ಲ. ಅಭ್ಯರ್ಥಿಗಳು ಓ.ಎಂ.ಆರ್., ಉತ್ತರ ಹಾಳೆ, ಪ್ರವೇಶ ಪತ್ರ ಮತ್ತು ಪ್ರಶ್ನೆ ಪುಸ್ತಕಗಳಲ್ಲಿ ಸೂಚಿಸಲಾಗಿರುವ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ ಪರೀಕ್ಷೆಯು ಶಾಂತಿಯುತವಾಗಿ ನಡೆಯಲು ಸಹಕಾರ ನೀಡತಕ್ಕದ್ದು, ಅಂಗವಿಕಲ ಅಭ್ಯರ್ಥಿ ಮತ್ತು ಲಿಪಿಕಾರರಿಗೆ ವಿಶೇಷ ಸೂಚನೆಗಳು: ತಮ್ಮದೇ ಆದ ಲಿಪಿಕಾರರನ್ನು ಕರೆತರಲು ಆಯ್ಕೆ ಮಾಡಿಕೊಂಡಿರುವ ಅಂಗವಿಕಲ ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರದೊಂದಿಗೆ ಲಿಪಿಕಾರರ ಪ್ರವೇಶ ಪತ್ರವನ್ನು ಸಹ ಡೌನ್–ಲೋಡ್ ಮಾಡಿಕೊಳ್ಳತಕ್ಕದ್ದು. ಲಿಪಿಕಾರರ ಸೇವೆಯನ್ನು ಪಡೆಯಲು ಅನುಮತಿಸಲಾದ ಅಭ್ಯರ್ಥಿಗಳಿಗೆ ಪ್ರತಿ ಗಂಟೆಗೆ 20 ನಿಮಿಷಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಲಾಗುವುದು. ಲಿಪಿಕಾರ ಹಾಗೂ ಅಭ್ಯರ್ಥಿಯ ನಡುವೆ ನಡೆಯುವ ಸಂವಾದವು ಪರೀಕ್ಷಾ ಕೊಠಡಿಯಲ್ಲಿನ ಶಾಂತಿಗೆ ಭಂಗ ತರಬಾರದು ಅಥವಾ ಅದೇ ಕೊಠಡಿಯಲ್ಲಿರುವ ಇತರೆ ಅಭ್ಯರ್ಥಿಗಳಿಗೆ ತೊಂದರೆ ಉಂಟು ಮಾಡುವಂತೆ ಇರಬಾರದು. ಅಭ್ಯರ್ಥಿಯು ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿಯವರು ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE READERS
Classified Advertisements
Examples: Job postings, Real estate listings, Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94 48 63 30 38
Email:- hampitimes@gmail.com

# ಇಂದು, ನಾಳೆ ಪಿಡಿಒ 150 ಹುದ್ದೆಗೆ ಪರೀಕ್ಷೆ

## ಡಿಸಿ ಎಂ.ಎಸ್.ದಿವಾಕರ ಹೇಳಿಕೆ। ಪರೀಕ್ಷಾ ಶಿಸ್ತು ಕಾಪಾಡಿ, ಅಭ್ಯರ್ಥಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಿ

## ಜಿಲ್ಲೆಯಲ್ಲಿ 19 ಪರೀಕ್ಷಾ ಕೇಂದ್ರ। ಮೊದಲ ದಿನ 8,283, 2ನೇದಿನ 12,036 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಲೋಕಸೇವಾ ಆಯೋಗದಿಂದ ಉಳಿಕೆ ಮೂಲವೃಂದದ ಪಿಡಿಓ 150 ಹುದ್ದೆಗಳ ಆಯ್ಕೆಗೆ ಡಿಸೆಂಬರ್ 7 ಮತ್ತು 8 ರಂದು ನಡೆಯುವ ಪರೀಕ್ಷೆಯನ್ನು ಅಚ್ಚು ಕಟ್ಟಾಗಿ ನಡೆಸಿ ಯಾವುದೇ ಅವ್ಯವಹಾರಗಳು ನಡೆಯದಂತೆ ನೋಡಿಕೊಂಡು ಪರೀಕ್ಷೆ ನಡೆಸುವಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅಧಿಕಾರಿಗಳಿಗೆ ಸೂಚಿಸಿದರು.



ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶುಕ್ರವಾರ ನಡೆದ ಉಳಿಕೆ ಮೂಲ ವೃಂದದ ಪಿಡಿಓ ಹುದ್ದೆ ನೇಮಕಾತಿ ಪರೀಕ್ಷೆಯ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿದ ಅಧಿಕಾರಿಗಳು ಸೂಕ್ಷ್ಮ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ನಿರ್ವಹಿಸಬೇಕು. ಜಿಲ್ಲೆಯಲ್ಲಿ ಡಿ.7 ರಂದು ನಡೆಯುವ ಕಡ್ಡಾಯ ಕನ್ನಡ ಪರೀಕ್ಷೆಯು ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆಯವರೆಗೆ ನಡೆಯಲಿದೆ. ಈ ಪರೀಕ್ಷೆಗೆ ಹೊಸಪೇಟೆಯಲ್ಲಿ 11, ಹಗರಿಬೊಮ್ಮನಹಳ್ಳಿಯಲ್ಲಿ 5 ಹಾಗೂ ಕೂಡ್ಲಿಗಿ ಯಲ್ಲಿ 3 ಒಟ್ಟು ಕೇಂದ್ರಗಳು ಸೇರಿ 19 ಪರೀಕ್ಷಾ ಕೇಂದ್ರಗಳಿದ್ದು, 8,283 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಮತ್ತು ಡಿ. 8 ರಂದು ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಯ ಮೊದಲ ಪತ್ರಿಕೆ ಬೆಳಿಗ್ಗೆ 10 ರಿಂದ 11.30 ರವರೆಗೆ ಮತ್ತು ಪೇಪರ್–2 ಮಧ್ಯಾಹ್ನ 2 ರಿಂದ 4 ಗಂಟೆಯ ವರೆಗೆ ನಡೆಯಲಿದ್ದು, ಜಿಲ್ಲೆಯಲ್ಲಿ ಒಟ್ಟು 12,036 ಅಭ್ಯರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದಾರೆ ಎಂದು ಸಭೆಗೆ ಮಾಹಿತಿ ನೀಡಿದರು.

ಪ್ರತಿ 4 ಪರೀಕ್ಷಾ ಕೇಂದ್ರಗಳಿಗೆ ಒಬ್ಬರಂತೆ ಒಟ್ಟು 9 ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನಿಯೋಜಿಸಿದ್ದು, ಅವರು ಪರೀಕ್ಷಾ ಕೇಂದ್ರದ ಸಂಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ. ಪರೀಕ್ಷಾ ವೇಳಾಪಟ್ಟಿಯಂತೆ ತಮಗೆ ನಿಯೋಜಿಸಿದ ಕೇಂದ್ರದಲ್ಲಿ ಪರೀಕ್ಷಾ ಪೂರ್ವ ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಖಚಿತ ಪಡಿಸಿಕೊಂಡು, ಮೂಲಭೂತ ಸೌಕರ್ಯಗಳಾದ ಆಸನಗಳು, ಕುಡಿಯುವ ನೀರು, ಗಾಳಿ–ಬೆಳಕಿನ ವ್ಯವಸ್ಥೆ ಇತ್ಯಾದಿ ಗಳನ್ನು ಒದಗಿಸಿರುವ ಬಗ್ಗೆ ಪರಿಶೀಲಿಸ ಬೇಕು. ಪರೀಕ್ಷಾ ದಿನದಂದು ವಿದ್ಯಾರ್ಥಿಗಳ ನೋಂದಣಿ, ಹಾಜರಿ ಮತ್ತು ಗೈರು ಹಾಜರಿಯ ಕುರಿತು ಮತ್ತು ಪರೀಕ್ಷೆಯಲ್ಲಿ ಏನಾದರೂ ಅಹಿತಕರ ಘಟನೆಗಳು ಸಂಭವಿಸಿದರೆ ಅಂತಹ ವಿವರಗಳ ವರದಿಯನ್ನು ಪರೀಕ್ಷಾ ಕೇಂದ್ರದ ಲಾಗಿನ್ ಮೂಲಕ ಅಪ್ ಲೋಡ್ ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ನಂತರ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಅವರು ಮಾತನಾಡಿ, ಪರೀಕ್ಷೆಗೆ ನಿಯೋಜಿಸಿದ ಅಧಿಕಾರಿಗಳು ಸೂಕ್ತ ಸಮಯದಲ್ಲಿ ಹಾಜರಿರ ಬೇಕು. ಅಧಿಕಾರಿಗಳು, ನೌಕರರು ಹಾಗೂ ಸಮನ್ವಯತೆ ಯಿಂದ ಕಾರ್ಯನಿರ್ವಹಿಸಿ ಅಭ್ಯರ್ಥಿಗಳನ್ನು ಎಲ್ಲ ಹಂತದಲ್ಲಿ ಸಂಪೂರ್ಣವಾಗಿ ಪರಿಶೀಲಿಸಬೇಕು. ಪರೀಕ್ಷಾ ಪ್ರಾಧಿಕಾರದ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ನಾವು ಮಾಡುವ ಸಣ್ಣ ತಪ್ಪುಗಳು ಅಭ್ಯರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರಬಹುದು ಎಂದು ಎಚ್ಚರಿಸಿದರು.

ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ವರಿಷ್ಠಾಧಿಕಾರಿ ಸಲೀಂ ಪಾಷ, ಸಹಾಯಕ ಆಯುಕ್ತರಾದ ಪಿ.ವಿವೇಕಾನಂದ, ಮುಖ್ಯ ಯೋಜನಾಧಿಕಾರಿ ಅನ್ನದಾನ ಸ್ವಾಮಿ, ತಹಶೀಲ್ದಾರರಾದ ಶೃತಿ ಎಂ.ಎಂ. ಸೇರಿದಂತೆ ವಿವಿಧ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಡಿ. 10 ಜಿಲ್ಲಾ ಮಟ್ಟದ ಸಿರಿಧಾನ್ಯ ರೋಡ್ ಶೋ

■ **ಹಂಪಿ ಟೈಮ್ಸ್ ಹೊಸಪೇಟೆ**

ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ–2025ರ ಅಂಗವಾಗಿ ವಿಜಯನಗರ ಜಿಲ್ಲೆಯ ಜಿಲ್ಲಾ ಮಟ್ಟದ ಸಿರಿಧಾನ್ಯ ನಡಿಗೆ (ರೋಡ್ ಶೋ) ಡಿಸೆಂಬರ್ 10 ರಂದು ಬೆಳಿಗ್ಗೆ 7.00 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಸಿರಿಧಾನ್ಯ ನಡಿಗೆಯು ನಗರದ ಎ.ಪಿ.ಎಂ.ಸಿ ವೃತ್ತದಿಂದ ಪ್ರಾರಂಭಿಸಿ ತರಕಾರಿ ಮಾರುಕಟ್ಟೆ, ದರ್ಗಾ ಮಸೀದಿ, ಬಸ್ ನಿಲ್ದಾಣ, ಶಾನಭಾಗ ವೃತ್ತ ಮಾರ್ಗವಾಗಿ ವಿಜಯನಗರ ಕಾಲೇಜ್ ಮೈದಾನದವರೆಗೆ ಸಾಗಲಿದೆ. ಈ ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲೆಯ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳು ಭಾಗವಹಿಸಿ ಕಾರ್ಯಕ್ರಮ ಯಶ್ವಸಿಗೊಳಿಸಬೇಕು ಎಂದು ಕೃಷಿ ಜಂಟಿ ನಿರ್ದೇಶಕರಾದ ಶರಣಪ್ಪ ಬಿ.ಮುದಗಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿ. 10 ಲೀನ್ ಯೋಜನೆ, ಝಡ್.ಇ.ಡಿ., ರಫ್ತು ಅರಿವು

■ **ಹಂಪಿ ಟೈಮ್ಸ್ ಹೊಸಪೇಟೆ**

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರ (ವಿ.ಟಿ.ಪಿ.ಸಿ) ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ, ಇವರುಗಳ ಸಹಯೋಗದಲ್ಲಿ ಎಂ.ಎಸ್.ಎಂ.ಇ.ಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಮತ್ತು ವೇಗಗೊಳಿಸುವ ಯೋಜನೆಯಡಿ ಲೀನ್ ಯೋಜನೆ ಮತ್ತು ಝಡ್.ಇ.ಡಿ. ಹಾಗೂ ರಫ್ತು ಕುರಿತು ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮ ವನ್ನು ಡಿಸೆಂಬರ್ 10 ರಂದು ಬೆಳಿಗ್ಗೆ 10.30 ಕ್ಕೆ ಹೊಸಪೇಟೆಯ ಹೋಟೆಲ್ ಮಲ್ಲಿಗೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕಾಸಿಯಾ ಅಧ್ಯಕ್ಷರಾದ ಎಂ. ಜಿ. ರಾಜಗೋಪಾಲ್ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯ್ ಮಹಮ್ಮದ್ ಅಲಿ ಅಕ್ರಂ ಷಾ ಹಾಗೂ ಗೌರವ ಅತಿಥಿಗಳಾಗಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಜಿ. ಹೆಚ್. ಕೋತಂಬರಿ (ಅಶ್ವಿನ್), ಕೈಗಾರಿಕಾ ವಸಾಹತು ವಾಣಿಜ್ಯೋದ್ಯಮಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಗುರುರಾಜ ದೇಶಪಾಂಡೆ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಸೋಮಶೇಖರ್ ಬಿ., ವಿಟಿಪಿಸಿ ಧಾರವಾಡ ಶಾಖಾ ಕಚೇರಿಯ ಉಪ ನಿರ್ದೇಶಕ ಮಲ್ಲಿಕಾರ್ಜುನ ಮತ್ತು ಗಣೇಶ್ ರಾವ್ ಬಿ.ಆರ್., ಸುರೇಶ್ ಎನ್. ಸಾಗರ್, ಜೆ.ಎಸ್. ಬಾಬು, ಸತೀಶ್ ಎನ್, ಮಂಜುನಾಥ ಹೆಚ್ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

# ಹೆಚ್ಚು ಶುಲ್ಕ ಬಡಮಕ್ಕಳ ಶೈಕ್ಷಣಿಕ ಪ್ರಗತಿಗೆ ಅಡ್ಡಗಾಲು

## ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿಕೆ। ವಿ.ವಿ. ಕ್ರಮದ ವಿರುದ್ಧ ಅಸಮಾಧಾನ



■ **ಹಂಪಿ ಟೈಮ್ಸ್ ಹರಪನಹಳ್ಳಿ**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿದ್ಯಾರ್ಥಿಗಳಿಂದ ದಾಖಲಾತಿ ಶುಲ್ಕ ಹೆಚ್ಚು ಪಡೆಯುತ್ತಿದೆ, ಪರೀಕ್ಷೆ ಫಲಿತಾಂಶದ ಸಮಸ್ಯೆ, ಅಂಕಪಟ್ಟಿ ವಿಳಂಬ ಹಾಗೂ ವಿವಿಸಿಎಂಎಸ್ ಪದ್ಧತಿಯನ್ನು ಕೂಡಲೇ ರದ್ದು ಪಡಿಸಬೇಕು ಎಂದು ಮಾಡಿರುವ ಮನವಿಗೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಪರಿಹಾರ ಒದಗಿಸುತ್ತೇನೆ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಭರವಸೆ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಪ್ರಾರಂಭವಾದ ವಿಶ್ವವಿದ್ಯಾಲಯ ಮಟ್ಟದ ಪುರುಷ ಹಾಗೂ ಮಹಿಳೆಯರ ಅಂತರ್ ಕಾಲೇಜು ಮಟ್ಟದ ಕುಸ್ತಿ ಪಂದ್ಯಾವಳಿಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರಕಾರಿ ಪದವಿ ಕಾಲೇಜಿನಲ್ಲಿ ಬಡ ಹಿಂದುಳಿದ ಮಕ್ಕಳು ವಿದ್ಯಾಭ್ಯಾಸಕ್ಕೆ ಆಗಮಿಸುತ್ತಾರೆ. ಅಂತಹ ವಿದ್ಯಾರ್ಥಿಗಳಿಗೆ ಹೆಚ್ಚು ಶುಲ್ಕದ ಹೊರೆ ಆದರೆ ಅವರ ಶೈಕ್ಷಣಿಕ ಪ್ರಗತಿಗೆ ಅಡ್ಡಗಾಲು ಹಾಕಿದಂತೆ. ಇನ್ನೂ ಪರೀಕ್ಷಾ ಫಲಿತಾಂಶ ಹಾಗೂ ಅಂಕಪಟ್ಟಿ ಸಮಸ್ಯೆಗೆ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರೊಂದಿಗೆ ಚರ್ಚಿಸಿ ಶೀಘ್ರ ಪರಿಹಾರ ಒದಗಿಸುತ್ತೇನೆ. ಅಲ್ಲದೇ ವಿವಿಸಿಎಂಎಸ್ ತೊಂದರೆಗೆ ವಿಧಾನ ಸೌಧದ ಅಧಿವೇಶನದಲ್ಲಿ ಚರ್ಚಿಸಲು ಸಮಯವಿಲ್ಲ ಆದರೆ ಸಂಬಂಧಿಸಿದ ಸಚಿವರೊಂದಿಗೆ ಸಮಾಲೋಚನೆ ಮಾಡುತ್ತೇನೆ ಎಂದರು.

ಕುಸ್ತಿ ಎಂದರೆ ಗರಡಿಮನೆಗಳು ಅವಶ್ಯವಾಗಿರಬೇಕು ಎನ್ನುವ ಕಾಲವಿತ್ತು. ಆದರೆ ಇಂದು ಅದರ ಸ್ಥಾನದಲ್ಲಿ ಜಿಮ್ ಆವರಿಸಿದೆ. ಗರಡಿಮನೆಗಳು ಅಪರೂಪವಾಗಿವೆ. ಕೆಂಪು ಮಣ್ಣಿನಲ್ಲಿ ಪೈಲ್ವಾನರು ಕಸರತ್ತು ಮಾಡಿ ಕಟ್ಟಿಗೆಯ ಹಾಗೂ ಕಲ್ಲುಗಳ ಸಾಮಗ್ರಿಗಳಲ್ಲಿ ಬಳಸಿ ಸದೃಢ ದೇಹವನ್ನು ಪಡೆಯುತ್ತಿದ್ದರು. ಇಂದು ಜಿಮ್‌ನಲ್ಲಿ ಸ್ಟೀಲ್ ಸ್ಪ್ರಿಂಗ್‌ಗಳ ಮೂಲಕ ಕಸರತ್ತು ಮಾಡಿ ಕುಸ್ತಿ ಕಲೆಗಳನ್ನು ಮುಂದುವರಿಸುತ್ತಿದ್ದಾರೆ. ಗರಡಿ ಮನೆಯಲ್ಲಿ ಹೆಣ್ಣು ಮಕ್ಕಳಿಗೆ ಪ್ರವೇಶವಿರಲಿಲ್ಲ ಆದರಿಂದು ಜಿಮ್‌ನಲ್ಲಿ ಮಹಿಳೆ ತರಬೇತಿ ಪಡೆದು ಕುಸ್ತಿ ಪಂದ್ಯಾವಳಿ ಯಲ್ಲಿ ಭಾಗವಹಿಸುತ್ತಿದ್ದಾಳೆ. ಅಲ್ಲದೇ ಒಲಂಪಿಕ್ ಮಟ್ಟದಲ್ಲಿ ಪದಕಗಳನ್ನು ಪಡೆದು ದೇಶದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ಎಲ್ಲರೂ ಸಮಾನವಾಗಿ ಕುಸ್ತಿ ಕಲೆಯನ್ನು ಉಳಿಸಿ ಬೆಳೆಸುತ್ತಿರುವುದು ಶ್ಲಾಘನೀಯ.

ಕ್ರೀಡಾ ಮನೋಭಾವದಿಂದ ಸ್ಪರ್ಧಿಗಳು ಭಾಗವಹಿಸಿ ತೀರ್ಪುಗಾರರ ನೀಡುವ ತೀರ್ಪಿಗೆ ಬೆಲೆ ನೀಡಿ. ರಕ್ತಪಾತ ಹೊಡೆದಾಟದಿಂದ ದೂರವಿರಿ ಎಂದು ಕಿವಿಮಾತು ಹೇಳಿದರು.

ಪಟ್ಟಣದ ಮಾಜಿ ಹಾಗೂ ಹಾಲಿ ಕುಸ್ತಿ ಪಟುಗಳಿಗೆ ಇದೇ ವೇಳೆ ಸನ್ಮಾನಿಸಲಾಯಿತು. ಕಾಲೇಜಿಗೆ ಹೆಚ್ಚುವರಿ ಜಮೀನು ಮಂಜೂರಾತಿ, ಮೇಲ್ಚಾವಣಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಸಾರ್ವಜನಿಕ ಆಸ್ಪತ್ರೆ ಬಳಿ ಪದವಿ ಕಾಲೇಜ್ ವಿದ್ಯಾರ್ಥಿಗಳಿಗೆ ರಾಜ್ಯ ಸಾರಿಗೆ ಸಂಸ್ಥೆಯ ಬಸ್ಸುಗಳ ಕೋರಿಕೆ ನಿಲುಗಡೆ, ಕಾಲೇಜ್ ರಸ್ತೆ ಬೀದಿ ದೀಪ, ಆರ್‌ಓ ಪ್ಲಾಂಟ್ ಬೇಕೆಂದು ಶಾಸಕರಿಗೆ ಕಾಲೇಜು ಸಿಬ್ಬಂದಿ ಮನವಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ವಿಎಸ್‌ಕೆಯುಬಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥರು ಡಾ. ಶಾಂತನಾಯ್ಕ್, ದೈಹಿಕ ಶಿಕ್ಷಕ ವಿಭಾಗದ ಡಾ.ಶಶಿಧರ ಕೊಲ್ಲೂರು, ಸಿಂಡಿಕೇಟ್ ಸದಸ್ಯ ಡಾ.ಪಿ.ಎಂ.ವಾಗೀಶ್, ಸರಕಾರಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಸತೀಶ್, ಕೂಡ್ಲಿಗಿ ಎಸ್‌ಎವಿಟಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಷಣ್ಮುಖನಗೌಡ, ಹೂವಿನಹಡಗಲಿ ಎಸ್‌ಎಸ್‌ಆರ್‌ಎಂಪಿಪಿಕೆ ಕಾಲೇಜಿನ ಪ್ರಾಂಶುಪಾಲರಾದ ಡಾ.ವಿಜಯ ಕುಮಾರ ಎಂ,. ವಕೀಲರಾದ ಕೆ.ಎಂ. ಚಂದ್ರಮೌಳಿ, ಡಾ.ಎಂ.ಸುರೇಶ್, ಕಸಾಪ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ದೈಹಿಕ ನಿರ್ದೇಶಕ ಕೊಟ್ರೇಶ್ ಹೆಚ್., ಪೈಲವಾನ್ ಪಿ.ನಾಗರಾಜ, ದ್ಯಾಮಜ್ಜಿ ಹನುಮಂತಪ್ಪ, ಟಿ.ವೆಂಕಪ್ಪ, ಶೇಖಪ್ಪ ಹಾಗೂ ಇತರರು ಭಾಗವಹಿಸಿದ್ದರು.

ADVERTISE WITH US
REACH
THOUSANDS OF POTENTIAL CUSTOMERS
HAMPI TIMES DAILY
Classifieds ✓
Display ✓
Take Advantage of Our Special Discounted rates
For More Information
9448633038
www.hampitimes.com

# ಮಹಾಮಾನವತಾವಾದಿ ಬಿ.ಆರ್.ಅಂಬೇಡ್ಕರ್

## ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಹೇಳಿಕೆ। ಪರಿನಿರ್ವಾಣ ದಿನಾಚರಣೆ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಈ ನೆಲದ ಪ್ರತಿಯೊಂದು ವಿಚಾರಗಳ ಬಗ್ಗೆ ಬಾಬ ಸಾಹೇಬ್ ಅಂಬೇಡ್ಕರ್ ಗೆ ಸ್ಪಷ್ಟವಾದ ಅರಿವಿದ್ದ ಪರಿಣಾಮ ದೇಶಕ್ಕೆ ಬಲಿಷ್ಟ ಮತ್ತು ಶ್ರೇಷ್ಟ ಸಂವಿಧಾನವನ್ನು ನೀಡಿದರು ಎಂದು ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಹೇಳಿದರು.



ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಗುರುವಾರ ಅಂಬೇಡ್ಕರ್ ಪರಿನಿರ್ವಾಣ ದಿವಸ್ ಕಾರ್ಯಕ್ರಮದ ಅಂಗವಾಗಿ ಅಂಬೇ ಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾ ಡಿದರು. ಅಸಮಾನತೆಯೇ ಮೇಳೈಸುತ್ತಿದ್ದ ಕಾಲದಲ್ಲಿ ತಾನು ಅನುಭವಿಸಿದ ನೋವು, ಯಾತನೆಗಳು ಮುಂದಿನ ಜನಾಂಗಕ್ಕೆ ಸಿಗಬಾರದು ಅನ್ನುವ ದೃಷ್ಟಿಯಿಂದ ನಿರಂತರ ವಾಗಿ ಅಧ್ಯಯನ ಮಾಡಿ, ಅಸ್ಪೃಶ್ಯತೆ, ಅಸ ಮಾನತೆ, ತಾರತಮ್ಯದ ವಿರುದ್ಧ ಹೋರಾಡಿ, ಪ್ರತಿಯೊಬ್ಬರ ಹಕ್ಕುಗಳಿಗಾಗಿ ನ್ಯಾಯ ಮಂಡನೆ ಮಾಡಿದರು.

ಅಂಬೇಡ್ಕರ್ ಅವರು ಭಾರತದ ಸಂವಿಧಾನಶಿಲ್ಪಿ ಮಾತ್ರವಲ್ಲದೇ, ನ್ಯಾಯ ಶಾಸ್ತ್ರಜ್ಞರಾಗಿ, ಅರ್ಥಶಾಸ್ತ್ರಜ್ಞರಾಗಿ, ಸಮಾಜ ಸುಧಾರಕರಾಗಿ, ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ, ಅಸ್ಪೃಶ್ಯತೆ, ಅಸಮಾನತೆಯ ವಿರುದ್ಧ ದಿಟ್ಟತನದಿಂದ ಹೋರಾಡಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗುವಂತೆ ಮಾಡಿದ ಮಹಾನ್ ಮಾನವತಾವಾದಿ. ಅಂಬೇಡ್ಕರ್ ಅವರ ಹೋರಾಟದ ಫಲವಾಗಿ ಇಂದು ದೇಶಾದ್ಯಂತ ಕೋಟ್ಯಂತರ ಮಂದಿ ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದಾರೆ. ಅಂಬೇಡ್ಕರ್ ಅವರು ಇಲ್ಲದೇ ಇರುತ್ತಿದ್ದರೆ ದೇಶದಲ್ಲಿ ಇಂದಿಗೂ ಸಹಸ್ರಾರು ಮಂದಿ ನಿತ್ಯ ನರಕವನ್ನು ಅನುಭವಿಸುತ್ತಿದ್ದರು ಎಂದು ತಿಳಿಸಿದರು. ಇದೆ ವೇಳೆ,ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ, ಗ್ರೇಡ್ 2 ತಹಸೀಲ್ದಾರ್ ವಿ.ಕೆ.ನೇತ್ರಾವತಿ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್. ವೆಂಕಟೇಶ, ಸಿಪಿಐ ಸುರೇಶ್ ತಳವಾರ, ಡಿ.ಎಸ್.ಎಸ್. ಜಿಲ್ಲಾ ಸಂಚಾಲಕ. ಎಸ್. ದುರುಗೇಶ್, ಸಿ.ವಿರುಪಾಕ್ಷಪ್ಪ, ಗಾಂಧಿ ಸ್ಮಾರಕ ಸಮಿತಿ ಅಧ್ಯಕ್ಷ ಡಿ.ನಾಗರಾಜ, ದುರು ಗಪ್ಪ ಕಾನಮಡುಗು, ಗುಡೆಕೋಟೆ ನಾಗರಾಜ, ಎನ್.ಪಕೀರಪ್ಪ ಕಾನಮಡುಗು, ಬಿ.ಮಹೇಶ್, ಕುಮಾರ್ ಮಾಕನಡಕು , ಕರಿಬಸಪ್ಪ ಲೋಕಿಕೆರೆ,ಗೋಣೆಪ್ಪ,ಅಜಯ್, ಎಳನೀರು ಗಂಗಣ್ಣ, ಎಂ.ಬಿ.ಶಿವರಾಜ್ ಸೇರಿದಂತೆ ಅನೇಕರು ಇದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ** **ಹಿಂದಿ**

### सूर -श्याम

**I . अनुरूपता :**

1) बलभद्र : बलराम :: कान्हा :-----( **कृष्ण** )

2) कृष्ण को चिढानेवाले : बलराम ::
चुटकी देकर हँसनेवाले : ------( **ग्वाल मित्र** )

3) कृष्ण को चिढानेवाले : बलराम ::
कृष्ण को मनानेवाले : ----------- ( **यशोदा** )

4) बलबीर : बलराम :: जसोदा : -----( **यशोदा** )

5) बालकृष्ण का रंग : काला ::
नंद और यशोदा का रंग : ---- ( **गोरा / सफेद** )

6)भोला -भाला : बालकृष्ण :: चुगलखोर : -------
( **बलराम** )

**II . एक वाक्य में उत्तर लिखिए |**

7) कृष्ण की शिकायत किसके प्रति है ?**उत्तर :**
उत्तर :कृष्ण की शिकायत **बलराम के** प्रति है |

8) चुटकी दे - देकर हँसनेवाले कौन थे ?
उत्तर : चुटकी दे-देकर हँसनेवाले **ग्वाल मित्र** थे |

9) बालकृष्ण का रंग कैसा था ?
उत्तर : बालकृष्ण का रंग **काला** था |

10) यशोदा किसकी कसम खाती है ?
उत्तर : यशोदा **गोधन की** कसम खाती है |

11) बलराम के अनुसार किसे मोल लाया है ?
उत्तर : बलराम के अनुसार कृष्ण को मोल लाया है |

**III.दो - तीन वाक्यों में उत्तर लिखिए |**

**8)कृष्ण बलराम के साथ खेलने क्यों नही जाना चाहता है ?**

**उत्तर :** उनका भाई बलराम उसे बहुत चिढाता है | वह उनसे कहता है कि तुम्हे यशोदा माँ ने जन्म नही दिया है बल्कि मोल लिया है इसी गुस्से के कारण वह उसके साथ मैं खेलने नही जाना चाहता है |

**10) कृष्ण अपनी माता यशोदा के प्रति क्यो नाराज है ?**

**उत्तर :** कृष्ण समझता है कि - माता यशोदा ने केवल उसे ही मारती है और भाई बलराम पर कभी गुस्सा नही करती है | इसलिए कृष्ण अपनी माता यशोदा के प्रति नाराज है |

**11) यशोदा कृष्ण के क्रोध को कैसे शांत करती है ?**

**उत्तर :** कृष्ण के क्रोधयुक्त मुख को देखकर और उसकी बातो को सुनकर यशोदा खुश हो जाती है | वह कहता है - हे कृष्ण ! सुनो | बलराम जन्म से ही चुगलाखोर है | मैं गोधन की कसम खाकरकहती हूँ , मैं ही तेरी माता और तुम मेरे पुत्र हो |

**III. तीन- चार वाक्यों में उत्तर लिखिए |**

**9) बालकृष्ण अपनी माता यशोदा से क्या-क्या शिकायते करता है ?**

**उत्तर :** बालकृष्ण अपनी माता यशोदा से इस तरह शिकायते करता है कि -

* भाई बलराम मुझे बहुत चिढाता है |
* वह मुझसे कहता है कि तुम्हे यशोदा माँ ने जन्म नही दिया है बल्कि मोल लिया है |
* वह मुझसे बार -बार पूछता है कि तुम्हारे माता-पिता कौन हैं ?
* वह कहता है कि नंद और यशोदा तो गोरे हैं, लेकिन तुम्हारा शरीर क्यो काला है ?
* उसकी ऐसी हँसी- मजाक सुनकर मेरे सब ग्वाल मित्र चुटकी बजा - बजाकर हँसते हैं , उन्हे बलराम ने ऐसे करना सिखाया है |

**प्रेरणार्थक शब्द**

पढना - पढाना - पढवाना
जागना - जगाना - जगवाना
पीना - पिलाना - पिलवाना

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ**, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ